ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 208

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಮಂಗಳವಾರ: 28-07-2026

# ಪ್ರಶ್ನೆಪತ್ರಿಕೆ ಸೋರಿಕೆಗೆ ಬ್ರೇಕ್: 10 ವರ್ಷ ಜೈಲು, 5 ಕೋಟಿ ದಂಡದ ಮಸೂದೆ ಮಂಡನೆ

**ನವದೆಹಲಿ, ಜು. 27–** ವಿರೋಧ ಪಕ್ಷಗಳ ಗದ್ದಲದ ನಡುವೆಯೇ ಲೋಕಸಭೆಯಲ್ಲಿಂದು ಪರೀಕ್ಷಾ ಅಕ್ರಮ ತಡೆ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಗಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮವನ್ನು ತಡೆಯಲು ಹೆಚ್ಚಿನ ಜೈಲು ಶಿಕ್ಷೆ, ದಂಡ ವಿಧಿಸುವ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿಂದು ವಿಪಕ್ಷಗಳ ಗದ್ದಲ, ಕೋಲಾಹಲದ ನಡುವೆಯೇ ಮಂಡಿಸಿತು.

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮ ತಡೆಯಲು ನೂತನ ತಿದ್ದುಪಡಿ ಮಸೂದೆಯನ್ನು ಮಂಡಿಸುವುದಾಗಿ ಪ್ರಧಾನಿ ಮೋದಿ ಘೋಷಿಸಿದ್ದರು. ಈ ತಿದ್ದುಪಡಿ ಮಸೂದೆಗೆ ಕೇಂದ್ರದ ಸಚಿವ ಸಂಪುಟ ಸಹ ಒಪ್ಪಿಗೆ ನೀಡಿತ್ತು. ಸಚಿವ ಸಂಪುಟದ ಒಪ್ಪಿಗೆ ನೀಡಿದ ಸಾರ್ವಜನಿಕ ಪರೀಕ್ಷೆಗಳ ( ಅಕ್ರಮ ತಡೆ) ತಿದ್ದುಪಡಿ ಮಸೂದೆ–2026ನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಯಲ್ಲಿಂದು ಮಂಡಿಸಿದರು.

ಈ ಮಸೂದೆ ಮಂಡನೆ ವೇಳೆ ಪ್ರತಿ ಪಕ್ಷಗಳು ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲಿನ ಪೊಲೀಸ್ ದೌರ್ಜನ್ಯವನ್ನು ಖಂಡಿಸಿ ಘೋಷಣೆಗಳನ್ನು ಕೂಗಿದ್ದು, ಸದನದಲ್ಲಿ ಗದ್ದಲ, ಕೋಲಾಹಲದ ವಾತಾವರಣಕ್ಕೆ ಕಾರಣವಾಯಿತು. ಈ ಗದ್ದಲ ಕೋಲಾಹಲದ ನಡುವೆಯ ಸಾರ್ವಜನಿಕ ಪರೀಕ್ಷೆ (ಅಕ್ರಮ ತಡೆ) ತಿದ್ದುಪಡಿ ಮಸೂದೆಯನ್ನು ಮಂಡಿಸಲಾಗಿದೆ.

ಈ ತಿದ್ದುಪಡಿ ಮಸೂದೆ ಬಗ್ಗೆ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಚರ್ಚೆಗಳು ನಡೆದು ಅದು ಅಂಗೀಕಾರವಾಗಬೇಕಾಗಿದೆ. ಪರೀಕ್ಷೆಗಳ ಅಕ್ರಮ ತಡೆಗೆ ಸಂಬಂಧಿಸಿದಂತೆ ಈಗಿರುವ ಕಾಯ್ದೆಗೆ ತಿದ್ದುಪಡಿ ತಂದು ಹೆಚ್ಚಿನ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸುವ ಪ್ರಸ್ತಾವವನ್ನು ನೂತನ



ಮಸೂದೆ ಒಳಗೊಂಡಿದೆ. ಈಗ ಲೋಕಸಭೆಯಲ್ಲಿ ಮಂಡಿಸಲಾಗಿರುವ ಪರೀಕ್ಷಾ ಅಕ್ರಮ ತಡೆ ತಿದ್ದುಪಡಿ ಮಸೂದೆಯಲ್ಲಿ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗುವ ವ್ಯಕ್ತಿಗಳಿಗೆ ಈಗಿರುವ ಕನಿಷ್ಠ 3 ವರ್ಷ, ಗರಿಷ್ಠ 5 ವರ್ಷ ಜೈಲು ಶಿಕ್ಷೆಯನ್ನು ಬದಲಿಸಿ, ಕನಿಷ್ಠ 5 ವರ್ಷ, ಗರಿಷ್ಠ 10 ವರ್ಷ ಜೈಲು ಶಿಕ್ಷೆ ವಿಧಿಸುವ ಅಂಶಗಳಿವೆ. ಹಾಗೆಯೇ ದಂಡವನ್ನು 10 ಲಕ್ಷದಿಂದ 50 ಲಕ್ಷಕ್ಕೆ ಏರಿಕೆ ಮಾಡಲಾಗಿದೆ.

ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗುವ ಖಾಸಗಿ ಸಂಸ್ಥೆಗಳು ಹಾಗೂ ಪರೀಕ್ಷಾ ಸೇವಾ ಸಂಸ್ಥೆಗಳನ್ನು ನಡೆಸುವವರಿಗೆ ದಂಡವನ್ನು 1 ರಿಂದ 5 ಕೋಟಿ ರೂ.ಗಳವರೆಗೆ ಏರಿಕೆ ಮಾಡಲಾಗಿದ್ದು, ಕನಿಷ್ಠ 7 ವರ್ಷದಿಂದ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾವ ಮಾಡಲಾಗಿದೆ.

ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಮುದ್ರಣ, ಸಾಗಾಣೆ ಮತ್ತಿತರ ಸೇವೆಗಳನ್ನು ಒದಗಿಸುವ ಸಂಸ್ಥೆಗಳು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದರೆ ಅವರಿಗೂ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಅಂಶಗಳು ಈ ತಿದ್ದುಪಡಿ ಮಸೂದೆಯಲ್ಲಿ ಇದೆ.

ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗುವ ಖಾಸಗಿ ಸಂಸ್ಥೆಗಳ ಏಜೆನ್ಸಿಗಳು, ಸಂಸ್ಥೆಗಳ ಮುಖ್ಯಸ್ಥರು ಹಾಗೂ ನಿರ್ದೇಶಕರುಗಳ ವಿರುದ್ಧವೂ ಮೊಕದ್ದಮೆ ದಾಖಲಿಸಲು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ತ್ವರಿತ ನ್ಯಾಯಾಲಯ ಸ್ಥಾಪನೆ: ಪರೀಕ್ಷಾ ಅಕ್ರಮಗಳ ತನಿಖೆಯನ್ನು ಎರಡು ತಿಂಗಳೊಳಗೆ ಪೂರ್ಣಗೊಳಿಸಿ ನಿಗದಿತ ಅಧಿಯೊಳಗೆ ನ್ಯಾಯಾಲಯದ ವಿಚಾರಣೆಯನ್ನು ಪೂರ್ಣಗೊಳಿಸಲು ತ್ವರಿತ ನ್ಯಾಯಾಲಯ ಸ್ಥಾಪನೆಗೂ ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ತನಿಖೆ ನಡೆಸುವ ಪೊಲೀಸರು ಕೇಂದ್ರದ ತನಿಖಾ ಸಂಸ್ಥೆಗಳ ನೆರವು ಪಡೆದು ತನಿಖೆಯ್ನು 2 ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂಬ ಅಂಶವನ್ನೂ ಈ ತಿದ್ದುಪಡಿ ಮಸೂದೆಯಲ್ಲಿ ಸೇರಿಸಲಾಗಿದೆ. ಹಾಗೆಯೇ ಕೇಂದ್ರ ಸರ್ಕಾರ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ವಿಶೇಷ ಟಾಸ್ಕ್‌ಫೋರ್ಸ್ ರಚಿಸಲು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ತ್ವರಿತ ನ್ಯಾಯಾಲಯಗಳು ಪ್ರತಿದಿನ ವಿಚಾರಣೆ ನಡೆಸಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳನ್ನು ಆರೋಪ ಪಟ್ಟಿ ಸಲ್ಲಿಕೆಯಾದ ಮೂರು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂಬ ಅಂಶವನ್ನು ಈ ತಿದ್ದುಪಡಿ ಕಾಯ್ದೆಯಲ್ಲಿ ಸೇರ್ಪಡೆ ಮಾಡಲಾಗಿದೆ.

ಲೋಕಸಭೆ ಮುಂದಕ್ಕೆ

ಪರೀಕ್ಷಾ ಅಕ್ರಮಗಳನ್ನು ತಡೆಯುವ ಮಸೂದೆ ಗದ್ದಲದಲ್ಲೇ ಮಂಡನೆಯಾದ ನಂತರ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಸದನವನ್ನು ಮಧ್ಯಾಹ್ನಕ್ಕೆ ಮುಂದೂಡಿದರು.

## ಪರೀಕ್ಷಾ ಅಕ್ರಮಕ್ಕೆ ಕಠಿಣ ಶಿಕ್ಷೆ!

–ಕನಿಷ್ಠ 5 ವರ್ಷ, ಗರಿಷ್ಠ 10 ವರ್ಷ ಜೈಲು ಶಿಕ್ಷೆ

–ದಂಡ 10 ಲಕ್ಷದಿಂದ 50 ಲಕ್ಷಕ್ಕೆ ಏರಿಕೆ

–ಖಾಸಗಿ ಸಂಸ್ಥೆಗಳಿಗೆ 5 ಕೋಟಿ ವರೆಗೆ ದಂಡ

–ಸಂಸ್ಥೆಗಳ ಮುಖ್ಯಸ್ಥರು, ನಿರ್ದೇಶಕರ ವಿರುದ್ಧವೂ ಪ್ರಕರಣ ದಾಖಲಿಸಲು ಅವಕಾಶ

–ವಿಶೇಷ ಟಾಸ್ಕ್‌ಫೋರ್ಸ್ ರಚನೆಗೆ ಅವಕಾಶ

–2 ತಿಂಗಳಲ್ಲಿ ತನಿಖೆ ಪೂರ್ಣಗೊಳಿಸುವ ಗುರಿ

–ತ್ವರಿತ ನ್ಯಾಯಾಲಯಗಳಲ್ಲಿ ಪ್ರತಿದಿನ ವಿಚಾರಣೆ

–ಲೋಕಸಭೆಯಲ್ಲಿ ತಿದ್ದುಪಡಿ ಮಸೂದೆ ಮಂಡನೆ

## ಆ.5 ರಂದು ಬರಕೋಲ್ ಚಳುವಳಿ ಹಾಗೂ ಮಾನ್ವಿ ಬಂದ್: ಹೊಳೆಯಪ್ಪ ಉಟಕನೂರು




ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕದ ಅಧ್ಯಕ್ಷರಾದ ಹೊಳೆಯಪ್ಪ ಉಟಕನೂರು ಮಾತನಾಡಿ ರೈತರ ವಿವಿಧ ಬೇಡಿಕೆ ಈಡೇರಿಕೆಗಾಗಿ ಆ.5 ರಂದು ಬೆಳಿಗ್ಗೆ 10ಕ್ಕೆ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ರೈತ ಸಂಘದಿಂದ ಬರಕೋಲ್ ಚಳುವಳಿ ಹಾಗೂ ಮಾನ್ವಿ ಬಂದ್ ನಡೆಸಲಾಗುವುದು. ರಾಜ್ಯದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿ ಬರಗಾಲ ಇದ್ದರು ಕೂಡ ಇದುವರೆಗೂ ರಾಜ್ಯ ಸರಕಾರ ಬರಗಾಲ ಘೋಷಣೆ ಮಾಡಿ ರೈತರಿಗೆ ಎಕರೆಗೆ ಕನಿಷ್ಟ 40 ಸಾವಿರ ಬರಪರಿಹಾರವನ್ನು ನೀಡದೆ ಇರುವುದರಿಂದ ಇಂದು ರೈತರು ತೀವ್ರವಾದ ಸಂಕಷ್ಟದಲ್ಲಿ ಇದ್ದರೆ , ತುಂಗಭದ್ರ ಜಲಾಶಯದಲ್ಲಿ 28 ಟಿ.ಎಂ.ಸಿ ನೀರು ಸಂಗ್ರಹಣೆ ಯಾಗಿದು ಒಳ ಹರಿವು ಕೂಡ ಉತ್ತಮವಾಗಿದೆ ಈ ಬಾರಿ ಕಾರ್ಖನೆಗಳಿಗೆ ನೀರು ಕೊಡದೆ . ರೈತರಿಗೆ ಕಾಲೂವೆ ಮೂಲಕ ನೀರನ್ನು ನಿರಂತರವಾಗಿ ಹರಿಸಿದಲ್ಲಿ ಮಾತ್ರ ರೈತರು ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷರಾದ ಕೆ.ವೈ.ಬಸವರಾಜ ಮಾತನಾಡಿ ತಾಲೂಕಿನಲ್ಲಿ ಸರಕಾರಕ್ಕೆ ಜೋಳವನ್ನು ಮಾರಾಟ ಮಾಡಿದ ರೈತರಿಗೆ 5 ತಿಂಗಳು ಕಳೆದರು ಕೂಡ ಹಣ ಜಮೆಯಾಗಿಲ್ಲ. ಮಳೆ ಇಲ್ಲದೆ ಕೃಷಿ ಚಟುವಟಿಕೆಗಳು ಸ್ಥಗಿತ ಗೊಂಡಿರುವುದರಿಂದ ತಾಲೂಕು ಪಂಚಾಯಿತಿ ವತಿಯಿಂದ ತಾಲೂಕಿನ 17 ಗ್ರಾಮ ಪಂಚಾಯಿತಿಗಳಲ್ಲಿ ಕೂಡಲೇ ವಿ.ಬಿ.ರಾಮಜೀ ಯಡಿಯಲ್ಲಿ ಗ್ರಾಮದಲ್ಲಿಯೇ ಕೂಲಿ ಕಾರ್ಮಿಕರಿಗೆ ಉದ್ಯೋಗವನ್ನು ಸೃಜಿಸಿ ಹೆಚ್ಚು ಕೂಲಿ ಕೆಲಸ ನೀಡುವ ಮೂಲಕ ಗ್ರಾಮೀಣ ಭಾಗದ ಜನರು ಗೂಳೆ ಹೊಗುವುದನ್ನು ತಡೆಯಬೇಕು ಎಂದು ಒತ್ತಾಯಿಸಿದರು.

ಶ್ಯಾಮಸಿಂಗ್‌ರಜಪೂತ್ , ತಾಲೂಕು ಗೌರವಾಧ್ಯಕ್ಷರಾದ ವೀರೇಶನಾಯಕ,ಕಾರ್ಯದರ್ಶಿ ಶ್ರೀಧರಕೋಟ್ನೆಕಲ್, ಉರುಕುಂದ ನಾಯಕ ಬಜಾರ,ಬುಜ್ಜಿ ಗೌಡ ,ವೆಂಕಟೇಶ ಕರಡಿಗುಡ್ಡ ಸೇರಿದಂತೆ ಇನ್ನಿತರರು ಇದ್ದರು.

## ಭಾರತೀಯ ಯೋಧರು ತೋರಿದ ಶೌರ್ಯ ತ್ಯಾಗದಿಂದ ಕಾರ್ಗಿಲ್ ಯುದ್ಧದಲ್ಲಿ ಗೆಲುವು: ಮಲ್ಲಯ್ಯ ನಾಯಕ್ ದೇವಪುರ್

ಧೈರ್ಯದ ದಾರಿ



**ಮಾನ್ವಿ:** ಪಟ್ಟಣದ ಕಲ್ಮಠ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಯೋಧ ಮಲ್ಲಯ್ಯ ನಾಯಕ್ ದೇವಪುರ್ ಮಾತನಾಡಿ ದೇಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ವೀರ ಯೋಧರನ್ನು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿರುತ್ತದೆ. ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಯೋಧರು ತೋರಿದ ಶೌರ್ಯ ತ್ಯಾಗ ಹಾಗು ದೇಶಭಕ್ತಿಯಿಂದಾಗಿ ನಾವು ಕಾರ್ಗಿಲ್ ಯುದ್ಧವನ್ನು ಗೆಲುವುದಕ್ಕೆ ಸಾಧ್ಯವಾಯಿತು.

ದೇಶ ಎಂದರೆ ಒಂದು ಕುಟುಂಬವಿದ್ದಂತೆ, ಇಂದಿನ ಯುವಕರು ದೇಶ ಪ್ರೇಮವನ್ನು ಬೆಳೆಸಿಕೊಳ್ಳಬೇಕು ಅಗತ್ಯವಾದಲ್ಲಿ ದೇಶಕ್ಕಾಗಿ ಪ್ರಾಣ ತ್ಯಾಗಕ್ಕೂ ಸಿದ್ದರಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾರ್ಗಿಲ್ ವೀರಯೋಧರಿಗೆ ಹಾಗೂ ನಿವೃತ್ತ ಯೋಧ ಮಲ್ಲಯ್ಯ ನಾಯಕ್ ದೇವಪುರ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ರಾಘವೇಂದ್ರ ಸಂಕೇಶ್ವರ್ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

## ಅಭಿವೃದ್ಧಿ ಯೋಜನೆಗೆ ಫಲಿತಾಂಶ ಆಧಾರಿತ ಮೇಲ್ವಿಚಾರಣೆ ಅಗತ್ಯ: ಸಂಸದ ಜಿ. ಕುಮಾರ ನಾಯಕ ಒತ್ತಾಯ



**ಯಾದಗಿರಿ/ರಾಯಚೂರು:** ಪ್ರಧಾನಮಂತ್ರಿ ಜನ ವಿಕಾಸ್ ಕಾರ್ಯಕ್ರಮ (ಪಿಎಂಜೆವಿಕೆ) ಅಡಿಯಲ್ಲಿ ಜಾರಿಯಾಗುತ್ತಿರುವ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗೆ ಫಲಿತಾಂಶ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸಂಸದ ಜಿ. ಕುಮಾರ ನಾಯಕ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗೆ ಕೇಂದ್ರ ಸರ್ಕಾರ ನೀಡಿರುವ ಉತ್ತರವನ್ನು ಉಲ್ಲೇಖಿಸಿ ಅವರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಅಲ್ಪಸಂಖ್ಯಾತರು ಹೆಚ್ಚಿರುವ ಜಿಲ್ಲೆಗಳ ಮೂಲಸೌಕರ್ಯ ಕೊರತೆ, ಸಾಮಾಜಿಕ–ಆರ್ಥಿಕ ಸೂಚ್ಯಂಕಗಳು ಹಾಗೂ ಮುಂದಿನ ಅಭಿವೃದ್ಧಿ ಅಗತ್ಯಗಳ ಕುರಿತು ಕೇಂದ್ರ ಸರ್ಕಾರ ಯಾವುದೇ ಸಮಗ್ರ ಮಾಹಿತಿ ಸಂಗ್ರಹಿಸುತ್ತಿಲ್ಲ ಎಂಬುದು ಆತಂಕಕಾರಿ ಎಂದು ತಿಳಿಸಿದ್ದಾರೆ.

ಯೋಜನೆಯ ಫಲಾನುಭವಿ ಪ್ರದೇಶಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ ಹಾಗೂ ಸ್ಥಳೀಯ ಅಗತ್ಯಗಳನ್ನು ಹೇಗೆ ಗುರುತಿಸಲಾಗಿದೆ ಎಂಬು ದರ ಕುರಿತು ಕೇಂದ್ರ ಮಟ್ಟದಲ್ಲಿ ಯಾವುದೇ ಕೇಂದ್ರೀಕೃತ ಮಾಹಿತಿ ಇಲ್ಲ ಎಂದು ಸಚಿವಾ ಲಯವೇ ಸ್ಪಷ್ಟಪಡಿಸಿದೆ ಎಂದು ಅವರು ಹೇಳಿದ್ದಾರೆ. 2021–22ರಿಂದ 2025–26ರ ವರೆಗೆ ಕರ್ನಾಟಕದಲ್ಲಿ ಪಿಎಂಜೆವಿಕೆ ಯೋಜನೆಯಡಿ 699 ಯೋಜನೆಗಳು ಅಥವಾ ಫಲಾನುಭವಿಗಳನ್ನು ದಾಖಲಿಸಲಾಗಿದ್ದು, 7 ಕೋಟಿಗೂ ಅಧಿಕ ಅನುದಾನ ಬಿಡುಗಡೆಯಾಗಿದೆ. ಆದರೆ ಯೋಜನೆಯ ಪರಿಣಾಮವನ್ನು ಅಳೆಯಲು ಅಗತ್ಯವಾದ ಮೌಲ್ಯಮಾಪನ ವ್ಯವಸ್ಥೆಯ ಕೊರತೆಯಿಂದ ಸಾರ್ವಜನಿಕ ಹಣದ ಸದ್ಬಳಕೆ ಹಾಗೂ ಯೋಜನೆಯ ಯಶಸ್ಸು ಎಷ್ಟರ ಮಟ್ಟಿಗೆ ಸಾಧನೆಯಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾ 2ನೇಪುಟಕ್ಕೆ

## ಸಿರವಾರ: ಸಮಸ್ಯೆಗಳ ಗೂಡಾದ ಸೋಮವಾರ ಸಂತೆ – ಶಾಶ್ವತ ಸ್ಥಳ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಆಗ್ರಹ

ಧೈರ್ಯದ ದಾರಿ



**ಸಿರವಾರ:** ಪಟ್ಟಣದ ಎಪಿಎಂಸಿ ಮುಖ್ಯ ರಸ್ತೆ ಹಾಗೂ ಸೋಮವಾರ ಸಂತೆ ರಸ್ತೆಯಲ್ಲಿಯೇ ತರಕಾರಿ, ಬಟ್ಟೆ ಮತ್ತು ಎಲೆಕ್ಟ್ರಾನಿಕ್ ಸಾಮಾನುಗಳನ್ನು ಮಾರಾಟ ಮಾಡಲಾಗುತ್ತಿದ್ದು, ಪ್ರತಿ ಸೋಮವಾರ ಸಂತೆ ನಡೆಯುವ ವೇಳೆ ತೀವ್ರ ಟ್ರಾಫಿಕ್ ಜಾಮ್ ಉಂಟಾಗುವುದು ಸರ್ವಸಾಮಾನ್ಯವಾಗಿದೆ.


ಸಂತೆಗೆ ನಿರ್ದಿಷ್ಟವಾದ ಮಾರುಕಟ್ಟೆ ಸ್ಥಳ ಇಲ್ಲದಿರುವುದರಿಂದ ರಸ್ತೆ ಮೇಲೆಯೇ ವ್ಯಾಪಾರ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಇದರಿಂದಾಗಿ ಇಲ್ಲಿಗೆ ಆಗಮಿಸುವ ವ್ಯಾಪಾರಸ್ಥರು ಮತ್ತು ಗ್ರಾಹಕರಿಗೆ ಕುಡಿಯುವ ನೀರು, ಶೌಚಾಲಯ ಹಾಗೂ ವಿಶ್ರಾಂತಿ ಗೃಹದಂತಹ ಮೂಲಭೂತ ಸೌಕರ್ಯಗಳಿಲ್ಲದೆ ಪರದಾಡುವಂತಾಗಿದೆ.

ವಿಶೇಷವಾಗಿ ಮಳೆ ಬಂದಾಗ ಇಡೀ ಸಂತೆ ಸಂಪೂರ್ಣಾವಸ್ಥೆಗೆ ತಲುಪಿ, ತರಕಾರಿಗಳು ಕೆಟ್ಟುಹೋಗಿ ರೈತರು ಹಾಗೂ ವ್ಯಾಪಾರಸ್ಥರು ನಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಿರವಾರ ಪಟ್ಟಣ ಪಂಚಾಯಿತಿ ಆಡಳಿತ ವರ್ಗ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು, ವ್ಯಾಪಾರ ಸ್ಥರಿಗೆ ಮತ್ತು ಗ್ರಾಹಕರಿಗೆ ಅನುಕೂಲವಾಗುವಂತೆ ಪ್ರತ್ಯೇಕ ಜಾಗವನ್ನು ಮಾರುಕಟ್ಟೆಗಾಗಿ ನಿಗದಿಪಡಿಸಬೇಕು. ಅಲ್ಲದೆ, ಆ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ವಿಶ್ರಾಂತಿ ಗೃಹದಂತಹ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ಭಾರತೀಯ ಮಾನವ ಹಕ್ಕುಗಳ ಪರಿಷತ್ ಸಿರವಾರ ತಾಲೂಕು ಅಧ್ಯಕ್ಷರಾದ ನಬಿ ರಸೂಲ್ ಆಗ್ರಹಿಸಿದ್ದಾರೆ.

## ಹೊಸ ಕಟ್ಟಡ ಕಾಮಗಾರಿ ಅರ್ಧಕ್ಕೆ ಸ್ಥಗಿತ: ಶಾಲೆಯಲ್ಲಿ ಕಿಡಿಗೇಡಿಗಳ ಹಾವಳಿ

### ಎಸ್‌ಡಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಸಿಕಂಟಿಯಿಂದ ತಾತ್ಕಾಲಿಕ ಕ್ರಮ

ಧೈರ್ಯದ ದಾರಿ






**ಸಿರವಾರ:** ಸರಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯ ಹೊಸ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿದೆ ಎಂದು ಹೇಳಿ ಹಳೆಯ ಕಟ್ಟಡವನ್ನು ತೆರವುಗೊಳಿಸಲಾಗಿದ್ದು, ಆದರೆ ಹೊಸ ಕಟ್ಟಡದ ಕಾಮಗಾರಿಯನ್ನು ಮಾತ್ರ ಅರ್ಧಕ್ಕೆ ನಿಲ್ಲಿಸಲಾಗಿದೆ.

ಕಾಮಗಾರಿ ಅಪೂರ್ಣಗೊಂಡಿರುವುದರಿಂದ ರಾತ್ರಿ ವೇಳೆ ಶಾಲೆಗೆ ಕಿಡಿಗೇಡಿಗಳು ನುಗ್ಗಿ ಅಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಶಾಲೆಯ ಎಸ್‌ಡಿಎಂಸಿ (SDMC) ಅಧ್ಯಕ್ಷರಾದ ಮಲ್ಲಿಕಾರ್ಜುನ ಸಿಕಂಟಿ ಅವರು, ಮಕ್ಕಳ ಸುರಕ್ಷತೆ ಹಾಗೂ ಶಾಲೆಯ ರಕ್ಷಣೆಗಾಗಿ ತಾತ್ಕಾಲಿಕವಾಗಿ ತಗಡು (ಚೆನ್) ಬಳಸಿ ಶಾಲೆಯ ಸುತ್ತ ಕಾಂಪೌಂಡ್ ನಿರ್ಮಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದಾರೆ.

ಮೊದಲನೇ ಪುಟದಿಂದ

## ಅಭಿವೃದ್ಧಿ ಯೋಜನೆಗೆ ಫಲಿತಾಂಶ ಆಧಾರಿತ ಮೇಲ್ವಿಚಾರಣೆ ಅಗತ್ಯ: ಸಂಸದ ಜಿ. ಕುಮಾರ ನಾಯಕ ಒತ್ತಾಯ

ಗುತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ರಾಯಚೂರು ಜಿಲ್ಲೆಯ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯನ್ನು ಉಲ್ಲೇಖಿಸಿದ ಸಂಸದರು, 2011ರ ಜನಗಣತಿಯ ಪ್ರಕಾರ ಜಿಲ್ಲೆಯ ಪರಿಶಿಷ್ಟ ಜಾತಿಯ ಮಹಿಳೆಯರ ಸಾಕ್ಷರತಾ ಪ್ರಮಾಣ ಕೇವಲ ಶೇ.37.03 ಇದ್ದು, ಇದು ರಾಷ್ಟ್ರೀಯ ಸರಾಸರಿ ಶೇ.56.46ಕ್ಕಿಂತ ಬಹಳ ಕಡಿಮೆ ಎಂದು ಹೇಳಿದರು. ಇಂತಹ ಅಸಮಾನತೆಗಳನ್ನು ನಿವಾರಿಸಲು ಜಿಲ್ಲಾ ಮಟ್ಟದ ವಿಶ್ವಾಸಾರ್ಹ ಮಾಹಿತಿಯ ಆಧಾರದ ಮೇಲೆ ಗುರಿ ಹೊಂದಿದ ಯೋಜನೆಗಳನ್ನು ರೂಪಿಸುವುದು ಅಗತ್ಯ ಎಂದು ಒತ್ತಿಹೇಳಿದರು.

ಜಿಲ್ಲಾವಾರು ಮಾಹಿತಿ ಲಭ್ಯವಿಲ್ಲದಿದ್ದರೆ ಸ್ಥಳೀಯ ಸಮಸ್ಯೆಗಳಿಗೆ ಸೂಕ್ತ ಪರಿಹಾರ ರೂಪಿಸಲು ಸಾಧ್ಯವಾಗುವುದಿಲ್ಲ. ಸಾರ್ವಜನಿಕ ಹಣದ ವೆಚ್ಚದ ಜೊತೆಗೆ ಅದರ ಫಲಿತಾಂಶಗಳ ಪಾರದರ್ಶಕ ಮೌಲ್ಯಮಾಪನವೂ ನಡೆಯಬೇಕು ಎಂದು ಅವರು ಹೇಳಿದರು.

ಈಗಾಗಲೇ ಪ್ರಧಾನಮಂತ್ರಿ ಆವಾಸ್ ಯೋಜನೆ–ಗ್ರಾಮೀಣ (ಪಿಎಂಎವೈ–ಜಿ) ಹಾಗೂ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಸೇರಿದಂತೆ ಹಲವು ಕೇಂದ್ರ ಯೋಜನೆಗಳಲ್ಲಿ ಜಿಲ್ಲಾವಾರು ಫಲಿತಾಂಶ ಆಧಾರಿತ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಇದೇ ಮಾದರಿಯನ್ನು ಪಿಎಂಜೆವಿಕೆ ಯೋಜನೆಯಲ್ಲೂ ಅಳವಡಿಸಬೇಕು ಎಂದು ಅವರು ಆಗ್ರಹಿಸಿದರು.

ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಯೋಜನೆಯ ಫಲಿತಾಂಶಗಳನ್ನು ನಿಯಮಿತವಾಗಿ ಪರಿಶೀಲಿಸಿ, ಮೂಲಭೂತ ಸೌಲಭ್ಯಗಳಿಂದ ವಂಚಿತ ಪ್ರದೇಶಗಳಿಗೆ ಮುಂದಿನ ಹಂತದ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ಸಂಸದ ಜಿ. ಕುಮಾರ ನಾಯಕ ಒತ್ತಾಯಿಸಿದ್ದಾರೆ.

## ದೇವರು ಹಸಿರನ್ನೂ ಕಾಯಲು, ಉಸಿರನ್ನೂ ನೀಡಿದನು!! ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಶುಭಾಶಯಗಳು

ಪ್ರಕೃತಿ ಎಂದಾಕ್ಷಣ ನೆನಪಿಗೆ ಬರುವುದು ಗಾಳಿ, ನೀರು, ಭೂಮಿ, ಸೂರ್ಯ, ಚಂದ್ರ, ನಕ್ಷತ್ರಗಳು, ಗುಡ್ಡ–ಬೆಟ್ಟಗಳು ಮತ್ತು ಕಾಡುಗಳು. ಇವೆಲ್ಲವೂ ನಮ್ಮ ಅಮೂಲ್ಯ ಪ್ರಕೃತಿ ಸಂಪತ್ತು.

ಈ ಸಂಪತ್ತನ್ನು ನಾವು ಇಂದು ಹೇಗೆ ಸಂರಕ್ಷಿಸಿ, ಬೆಳೆಸುತ್ತೇವೆಯೋ ಅದರ ಮೇಲೆಯೇ ಮುಂದಿನ ಪೀಳಿಗೆಯ ಬದುಕು ಅವಲಂಬಿತವಾಗಿದೆ.

ಪ್ರಕೃತಿ ನಮಗೆ ಉಸಿರು, ಆಹಾರ, ನೀರು, ನೆರಳು ಮತ್ತು ಜೀವನಕ್ಕೆ ಅಗತ್ಯವಾದ ಎಲ್ಲವನ್ನೂ ನೀಡಿದೆ. ಆದ್ದರಿಂದ ಪ್ರಕೃತಿಯ ಸಂಪನ್ಮೂಲಗಳನ್ನು ಮಿತವಾಗಿ ಬಳಸುವುದು, ಮರಗಳನ್ನು ನೆಡುವುದು, ನೀರನ್ನು ಉಳಿಸುವುದು ಹಾಗೂ ಪರಿಸರವನ್ನು ಸ್ವಚ್ಛವಾಗಿಡುವುದು ನಮ್ಮೆಲ್ಲರ ಕರ್ತವ್ಯ.

"ಇಂದು ನಾವು ಪ್ರಕೃತಿಯನ್ನು ಕಾಪಾಡಿದರೆ, ನಾಳೆ ಪ್ರಕೃತಿ ನಮ್ಮನ್ನು ಕಾಪಾಡುತ್ತದೆ."

ಒಂದು ಗಿಡ ನೆಡಿ  ಒಂದು ಜೀವ ಉಳಿಸಿ
ಪ್ರಕೃತಿಯನ್ನು ಪ್ರೀತಿಸಿ, ಭವಿಷ್ಯವನ್ನು ರಕ್ಷಿಸಿ.




## ವ್ಯಸನ ಮುಕ್ತ ದಿನಾಚರಣೆ ಅರ್ಥಪೂರ್ಣವಾಗಿ ಆಯೋಜಿಸಲು: ಅಪರ ಜಿಲ್ಲಾಧಿಕಾರಿ ಶಿವಾನಂದ ಸೂಚನೆ




ಧೈರ್ಯದ ದಾರಿ

**ರಾಯಚೂರು ಜುಲೈ 27:** ಜಿಲ್ಲೆಯಲ್ಲಿ ಮಹಾಂತ ಶಿವಯೋಗಿ ಜನ್ಮದಿನದ ಅಂಗವಾಗಿ ಆಗಸ್ಟ್ 1ರಂದು ವ್ಯಸನ ಮುಕ್ತ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಯೋಜಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜುಲೈ 27ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಭವನದ ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ತಹಶಿಲ್ದಾರರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಮಹಾಂತ ಶಿವಯೋಗಿ ಸ್ವಾಮೀಜಿ ಜನ್ಮ ದಿನಾಚರಣೆ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ವೇದಿಕೆ, ಆಸನ ವ್ಯವಸ್ಥೆ, ಕುಡಿಯುವ ನೀರು, ಸೇರಿದಂತೆ ಅಗತ್ಯ ಸೌಕರ್ಯ ಕಲ್ಪಿಸಬೇಕು. ವ್ಯಸನದ ದುಷ್ಪರಿಣಾಮ ಹಾಗೂ ಆರೋಗ್ಯಕರ ಜೀವನ ಶೈಲಿಯ ಕುರಿತು ತಜ್ಞರಿಂದ ಉಪನ್ಯಾಸ ಏರ್ಪಡಿಸಬೇಕು ಎಂದು ಸೂಚಿಸಿದರು.

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಯುವಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ ಹಾಗಾಗಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸಬೇಕು ಎಂದರು.

ಮಹಾಂತ ಶಿವಯೋಗಿ ಸ್ವಾಮೀಜಿ ಜನ್ಮ ದಿನಾಚರಣೆ ಅಂಗವಾಗಿ ಪ್ರತಿ ವರ್ಷ ಆ.1ರಂದು ಆಚರಿಸುವ ವ್ಯಸನ ಮುಕ್ತ ದಿನಾಚರಣೆಯನ್ನು ಜಿಲ್ಲಾ ಕೇಂದ್ರ ಮತ್ತು ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಅಚ್ಚುಕಟ್ಟಾಗಿ ಆಚರಣೆ ಮಾಡಬೇಕು. ಮಹಾಂತ ಶಿವಯೋಗಿಗಳು ವ್ಯಸನಮುಕ್ತ ಆಂದೋಲನದ ಹರಿಕಾರರಾಗಿದ್ದರು. ಶ್ರೀಗಳ ಜನ್ಮದಿನ ರಾಜ್ಯ ಸರ್ಕಾರವು ಪ್ರತಿ ವರ್ಷ ಆ.1ರಂದು ವ್ಯಸನ ಮುಕ್ತ ದಿನವನ್ನಾಗಿ ಆಚರಣೆ ಮಾಡುತ್ತಿದ್ದು, ಈ ದಿನಾಚರಣೆ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ರವಾನೆಯಾಗಬೇಕಿದೆ. ಜಿಲ್ಲಾ ಮಟ್ಟದ ವ್ಯಸನ ಮುಕ್ತ ದಿನಾಚರಣೆ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಬೇಕು ಎಂದರು.

ವ್ಯಸನ ಮುಕ್ತ ದಿನಾಚರಣೆ ಆ.1ರಂದು ಬೆಳಗ್ಗೆ 10:30 ಗಂಟೆಗೆ ರಾಯಚೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲು ಯೋಜಿಸಿದ್ದು. ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಬೇಕು. ಕಾಲೇಜು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತೆ ನೋಡಿಕೊಳ್ಳಬೇಕು ಎಂದರು.ಡಾ.ಮಹಾಂತ ಶಿವಯೋಗಿಗಳ ವಿಚಾರಗಳ ಜತೆಗೆ ಮದ್ಯಪಾನ, ಮಾದಕದ್ರವ್ಯ ಮತ್ತು ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿ ಯುವಜನರಿಗೆ ತಿಳಿಸುವ ಮಹತ್ ಕಾರ್ಯವಾಗಬೇಕು. ವ್ಯಸನಗಳಿಂದಾಗುವ ದುಷ್ಪರಿಣಾಮ ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ರಾಯಚೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಜಿ.ಸುರೇಶ, ಇಲಾಖೆಯ ಪ್ರಥಮ ದರ್ಜೆ ಸಹಾಯಕ ನರೇಶ್, ರಮೇಶ ಗೌಡೂರು, ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ಶಾಖೆಯ ಶಿರಸ್ತೆದಾರ ಋಷಿಕೇಶ್, ಅವಿನಾಶ್, ಅನೀಲ್ ಕುಮಾರ್ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ತಹಶಿಲ್ದಾರರು ಹಾಗೂ ಇತರೆ ಅಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು.

## ಹಿಪ್ಪರಗಿ ಕಾರು ಸ್ಫೋಟ ಪ್ರಕರಣ: ತನಿಖೆ ಚುರುಕು ಸಿಸಿ ಟಿವಿಯಲ್ಲಿ ಅನುಮಾನಾಸ್ಪದ ಚಲನವಲನ ಪತ್ತೆಯಾಗಿಲ್ಲ: ಎಸ್‌ಪಿ ಸಿದ್ದಾರ್ಥ ಗೋಯಲ್



**ಜಮಖಂಡಿ, ಜು. 27:**ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ನಿಲ್ಲಿಸಿದ್ದ ಕಾರೊಂದು ಶನಿವಾರ ರಾತ್ರಿ ಸುಮಾರು 10:45ಕ್ಕೆ ಏಕಾಏಕಿ ಸ್ಫೋಟಗೊಂಡ ಪ್ರಕರಣದ ತನಿಖೆ ಚುರುಕುಗೊಂಡಿದೆ. ಘಟನೆಯಲ್ಲಿ ಕಾರು ಸಂಪೂರ್ಣ ಜಖಂಗೊಂಡಿದ್ದು, ಕಾರಿನೊಳಗೆ ಯಾರೂ ಇಲ್ಲದ ಕಾರಣ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.
ಸ್ಫೋಟಗೊಂಡ ಕಾರು ಹಿಪ್ಪರಗಿ ಗ್ರಾಮದ ಯುವರಾಜ ವೈನ್‌ಶಾಪ್ ವ್ಯವಸ್ಥಾಪಕ ಹಣಮಂತ ಅಥಣಿ ಅವರಿಗೆ ಸೇರಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಡಿವೈಎಸ್‌ಪಿ ಸಯ್ಯದ್ ರೋಷನ್ ಜಮೀರ್, ಸಿಪಿಐ ಮಲ್ಲಪ್ಪ ಮಡ್ಡಿ, ಪಿಎಸ್‌ಐ ಗಂಗಾಧರ ಪೂಜೇರಿ, ಅಪರಾಧ ವಿಭಾಗದ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಭಾನುವಾರ ಬೆಳಗ್ಗೆಯಿಂದಲೇ ಪ್ರಕರಣದ ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಲಾಗಿದ್ದು, ಬಾಂಬ್ ನಿಷ್ಕ್ರಿಯ ದಳ (BDDS), ಎಎಸ್‌ಸಿ ಬೆಳಗಾವಿ, ಹುಬ್ಬಳ್ಳಿ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ, ನ್ಯಾಯ ವಿಜ್ಞಾನ ಪ್ರಯೋಗಾಲಯ (FSL), ಶ್ವಾನ ದಳ ಹಾಗೂ ಬೆರಳಚ್ಚು ತಜ್ಞರು ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ.

ಕಾರು ಅವಶೇಷಗಳು ಸುಮಾರು 40 ರಿಂದ 50 ಮೀಟರ್ ದೂರದವರೆಗೆ ಚದುರಿರುವ ಹಿನ್ನೆಲೆಯಲ್ಲಿ ಸ್ಫೋಟದ ನಿಖರ ಕಾರಣ ಪತ್ತೆಹಚ್ಚಲು ವೈಜ್ಞಾನಿಕ ಪರೀಕ್ಷೆ ನಡೆಸಲಾಗುತ್ತಿದೆ.
ಸಿಸಿ ಟಿವಿಯಲ್ಲಿ ಅನುಮಾನಾಸ್ಪದ ಚಲನವಲನ ಇಲ್ಲ
ಪ್ರಕರಣ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಕಾರನ್ನು ಶನಿವಾರ ಮಧ್ಯಾಹ್ನ ಸುಮಾರು 4:30ಕ್ಕೆ ವೈನ್‌ಶಾಪ್ ಎದುರು ನಿಲ್ಲಿಸಲಾಗಿತ್ತು ಎಂದು ತಿಳಿಸಿದರು.
ರಾತ್ರಿ 10:45ಕ್ಕೆ ಸ್ಫೋಟ ಸಂಭವಿಸಿದ್ದು, ಈ ಸಂಪೂರ್ಣ ಘಟನೆ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಪ್ರಾಥಮಿಕ ಪರಿಶೀಲನೆಯಲ್ಲಿ ಯಾವುದೇ ಅನುಮಾನಾಸ್ಪದ ವ್ಯಕ್ತಿ ಕಾರಿನ ಬಳಿ ಬಂದಿರುವುದು ಕಂಡುಬಂದಿಲ್ಲ. ರಾತ್ರಿ 9:45ರ ಸುಮಾರಿಗೆ ಕಾರಿನ ಬಳಿ ಬಂದ ಮೂವರು ಗ್ರಾಹಕರನ್ನು ಪರಿಶೀಲಿಸಲಾಗಿದ್ದು, ಅವರ ಬಗ್ಗೆ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

ಎಕ್ಸ್‌ಪೋಸಿವ್ ಡಿಟೆಕ್ಷನ್ ಶ್ವಾನದ ಮೂಲಕವೂ ಪರಿಶೀಲನೆ ನಡೆಸಲಾಗಿದ್ದು, ಇದುವರೆಗೆ ಯಾವುದೇ ಸ್ಫೋಟಕ ವಸ್ತುವಿನ ಸುಳಿವು ಸಿಕ್ಕಿಲ್ಲ. ತಾಂತ್ರಿಕ ದೋಷ, ವಾಹನದ ಬಿಡಿಭಾಗಗಳ ದೋಷ ಅಥವಾ ಇತರ ಕಾರಣಗಳಿಂದ ಸ್ಫೋಟ ಸಂಭವಿಸಿರುವ ಸಾಧ್ಯತೆಯೂ ಪರಿಶೀಲನೆಯಲ್ಲಿದೆ ಎಂದು ಎಸ್‌ಪಿ ತಿಳಿಸಿದ್ದಾರೆ.
ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಬೈಕ್‌ನಲ್ಲಿ ತೆರಳುತ್ತಿದ್ದ ವ್ಯಕ್ತಿಯೊಬ್ಬರಿಗೆ ಸಣ್ಣ ಪ್ರಮಾಣದ ಗಾಯವಾಗಿದ್ದು, ಕಾರಿನ ಮಾಲೀಕ ಹಾಗೂ ಸಾರ್ವಜನಿಕರು ಸುರಕ್ಷಿತರಾಗಿದ್ದಾರೆ. ಕೆಲ ಆಸ್ತಿಪಾಸ್ತಿಗಳಿಗೆ ಸಣ್ಣ ಪ್ರಮಾಣದ ಹಾನಿಯಾಗಿದ್ದು, ಅದರ ಬಗ್ಗೆಯೂ ಪರಿಶೀಲನೆ ಮುಂದುವರಿದಿದೆ ಎಂದು ಅವರು ತಿಳಿಸಿದ್ದಾರೆ.

## ಕಾರ್ಗಿಲ್ ವಿಜಯೋತ್ಸವ ಆಚರಣೆ



**ಕಲಬುರಗಿ,ಜು.27**–ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಂಸ್ಥೆಯಿಂದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮ ಮತ್ತು ಜಾಥಾ ಕಾರ್ಯಕ್ರಮ ಮಾಡಲಾಯಿತು.
ಜಿಲ್ಲಾ ಕೇಂದ್ರ ಕಚೇರಿಯಿಂದ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.
ಕಬ್ ಬುಲ್ ಬುಲ್ ಸ್ಕೌಟ್ಸ್ ಗೈಡ್ಸ್, ರೋವರ್ ರೇಂಜರ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಮತ್ತು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಜಾಥಾದಲ್ಲಿ ಭಾಗವಹಿಸಿದ್ದರು ಜಾಥಾ ಕಾರ್ಯಕ್ರಮವು ನಗರದ ಸುಪರ್ ಮಾರ್ಕೆಟ್‌ನ ಎಂಪಿಎಸ್‌ಹೆಚ್ ಶಾಲೆಯಿಂದ ಪ್ರಾರಂಭವಾಗಿ ತಹಸೀಲ್ದಾರ್ ಕಾರ್ಯಾಲಯದಿಂದ ಜಗತ್ ಸರ್ಕಲ್ ಮತ್ತು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಚೌಕ ಪೊಲೀಸ್ ಸ್ಟೇಷನ್ ಮಾರ್ಗದಿಂದ ಮರಳಿ ಜಿಲ್ಲಾ ಸಂಸ್ಥೆ ಕೇಂದ್ರ ಕಚೇರಿಗೆ ತಲುಪಲಾಯಿತು.
ನಂತರ ಕಾರ್ಗಿಲ್ ವಿಜಯೋತ್ಸವ ಆಚರಣೆ ಮಾಡಲಾಯಿತು. ಜಿಲ್ಲಾ ಸಂಸ್ಥೆ ಕಾರ್ಯದರ್ಶಿ ಪೀರಪ್ಪ ಹೂಗೊಂಡ ಕಾರ್ಗಿಲ್ ವಿಜಯೋತ್ಸವ ಆಚರಣೆ ಕುರಿತು ಪ್ರಾಸ್ತಾವಿಕ ಮಾತನಾಡಿದರು, ನಂತರ ದೇಶ ಸೇವೆ ಸಲ್ಲಿಸಿದ ಸೈನಿಕರಿಗೆ ಜಿಲ್ಲಾ ಸಂಸ್ಥೆಯಿಂದ ಗೌರವಿಸಿ ಸನ್ಮಾನಿಸಲಾಯಿತು ಮತ್ತು ಸೈನಿಕರು ತಮ್ಮ ಹೋರಾಟ ಮತ್ತು ಕಾರ್ಗಿಲ್ ವಿಜಯೋತ್ಸವ ಆಚರಣೆ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಕಬ್ ಬುಲ್ ಬುಲ್ ಸ್ಕೌಟ್ಸ್ ಗೈಡ್ಸ್ ರೋವರ್ ರೇಂಜರ್ಸ್ 260 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಪಾಲಕರು ಭಾಗವಹಿಸಿದ್ದರು. ಸಂಸ್ಥೆಯ ಜಿಲ್ಲಾ ಉಪಾಧ್ಯಕ್ಷ ಸೈಯದ್ ಮೊಹಮ್ಮದ್, ಜಿಲ್ಲಾ ಜಂಟಿ ಕಾರ್ಯದರ್ಶಿ ರಾಜಕುಮಾರ್ ಮರಾಠೆ, ಜಿಲ್ಲಾ ಸಹ ಕಾರ್ಯದರ್ಶಿ ರಾಜಮಾನೆ, ಜಿಲ್ಲಾ ಖಜಾಂಗಿ ಪ್ರಮೀಳಾ ಪಾಟೀಲ್, ಡಿಟಿಸಿ ಅಮರೇಶ ಕೂರಿ, ಸುಮಂಗಲಾ ಕೂರಿ, ಶರೀಫ್ ಹತ್ತಿಮತ್ತೂರ್ ಎ ಎಸ್ ಓ ಸಿ ಶಿಲಿಸಿದ್ದ ಹೂಗಾರ, ಹಿರಿಯ ಶಿಕ್ಷಕ ರಾಜೇಂದ್ರ ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು. ಗುರುಲಿಂಗಯ್ಯ ಕಾರ್ಯಕ್ರಮ ನಿರೂಪಿಸಿದರು. ಜಯಪ್ರಕಾಶ ಸ್ವಾಗತಿಸಿದರು. ಪ್ರಮೀಳಾ ಪಾಟೀಲ ವಂದಿಸಿದರು.

## 1.48 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು

**ಕಲಬುರಗಿ,ಜು.27**–ಮನೆ ಬೀಗ ಮುರಿದು 1.48 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಕೋಟನೂರ (ಡಿ)ಯ ದರ್ಶನಾಪೂರ ಲೇಔಟ್‌ನಲ್ಲಿ ನಡೆದಿದೆ. ಸಿದ್ದಪ್ಪ ಸೊನ್ನದ ಎಂಬುವವರ ಮನೆ ಬೀಗ ಮುರಿದು ಕಳ್ಳರು 60 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಲಾಕೆಟ್, 60 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ 2 ಚೈನ್, 28 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಜುಮಕಿ ಮತ್ತು ಮಾಟಿ ಸೇರಿ 1.48 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ.

ಸಿದ್ದಪ್ಪ ಸೊನ್ನದ ಅವರು ತಮ್ಮ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದುದ್ದರಿಂದ ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಗೋಗಿ ಗ್ರಾಮಕ್ಕೆ ಹೋಗಿದ್ದರು. ಈ ವೇಳೆ ಮನೆ ಕಳ್ಳತನವಾಗಿದೆ ಎಂದು ತಿಳಿದುಬಂದಿದೆ.




ಈ ಸಂಬಂಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಖಾಸ್ಗತೇಶ್ವರ ಮಠದಲ್ಲಿ ಗೋಪಾಲ ಕಾವಲಿ



**ತಾಳಿಕೋಟೆ:** ಸ್ಥಳೀಯ ಶ್ರೀ ಖಾಸ್ಗತ ಮಹಾ ಶಿವಯೋಗಿಗಳ ಜಾತ್ರೆ ಹಾಗೂ ರಥೋತ್ಸವ ಅಂಗವಾಗಿ ರವಿವಾರರಂದು ನಸುಕಿನ ಜಾವ 5–30 ಕ್ಕೆ ಅಸಂಖ್ಯಾತ ಭಕ್ತ ಸಮೂಹದ ಸಮ್ಮುಖದಲ್ಲಿ ಗೋಪಾಲ ಕಾವಲಿ(ಮೊಸರು ಗಡಿಗೆ) ಒಡೆಯುವ ಕಾರ್ಯಕ್ರಮವು ಭಕ್ತಿ ಭಾವದೊಂದಿಗೆ ಜರುಗಿತು.

ಶ್ರೀ ಖಾಸ್ಗತ ಮಹಾ ಶಿವಯೋಗಿಗಳ ಜಾತ್ರಾ ಮಹೋತ್ಸವ ಅಂಗವಾಗಿ ಕಳೆದ 9 ದಿನಗಳ ಕಾಲ ನಡೆಸಿಕೊಂಡು ಬರಲಾದ ಸಪ್ತ ಭಜನಾ ಕಾರ್ಯಕ್ರಮವು ಗೋಪಾಲಕಾವಲಿ(ಮೊಸರುಗಡಿಗೆ) ಒಡೆಯುವದರ ಮೂಲಕ ಇಂದು ಮಂಗಲಗೊಂಡಿತು. ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಘನ ಅಧ್ಯಕ್ಷತೆಯಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ನಸುಕಿನ ಜಾವ 4 ಘಂಟೆಗೆ ಭವ್ಯ ಪ್ರಭಾತ ಪೇರಿಯೊಂದಿಗೆ ಧ್ವಜದ ಮೆರವಣಿಗೆ ನಡೆಯಿತಲ್ಲದೇ ಶ್ರೀ ಮಠದ ಪ್ರಾಂಗಣದಲ್ಲಿ ಕಟ್ಟಲಾದ ಗೋಪಾಲ ಕಾವಲಿ ಒಡೆಯುವ ಕಾರ್ಯಕ್ರಮವನ್ನು ನಸುಕಿನ 5–30 ಘಂಟೆಗೆ ಶ್ರೀ ಖಾಸ್ಗತೇಶ್ವರ ಮಠದ ವೇ॥ ಮಾಹಾಂತಯ್ಯ ವಿರಕ್ತಮಠ ಅವರು ನೆರವೇರಿಸಿದರು.

ಗೋಪಾಲ ಕಾವಲಿಯ ವಿಶೇಷ :–

ಈ ಗೋಪಾಲ ಕಾವಲಿ ಒಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಭಕ್ತಾಧಿಗಳ ಮೇಲೆ ಮೊಸರು, ಹಾಲು, ಜೇನುತುಪ್ಪ ಹಾಗೂ ಇನ್ನಿತರ ಒಳಗೊಂಡ ಅಮೃತ ತುಂಬಿದ ಗಡಿಗೆ ಒಡೆದ ನಂತರ ಕೆಳಗೆ ನಿಂತ ಭಕ್ತಾಧಿಗಳ ಮೈಮೇಲೆ ಬಿದ್ದರೆ ಜೀವನ ಪಾವನಮಯವಾಗುತ್ತದೆ ಮತ್ತು ಒಡೆದ ಗಡಿಗೆಯ ಚೂರುಗಳಾಗಲಿ ಅಥವಾ ಗಡಿಗೆಯ ಜೊತೆಗಿದ್ದ ಹೂ ಇನ್ನಿತರ ಪೂಜಾ ಸಾಮಗ್ರಿಗಳಾಗಲಿ ಕೆಳಗೆ ನಿಂತ ಭಕ್ತರಿಗೆ ದೊರೆತರೆ ಮನೆಯಲ್ಲಿ ಸದಾ ಹಾಲು, ಹೈನು ಹೆಚ್ಚುವದರೊಂದಿಗೆ ಸಂಪತ್ಭರಿತವಾಗಿ ಬಡತನವೆಂಬುದು ನಿವಾರಣೆಯಾಗಿ ಶ್ರೀಮಂತಿಕೆತನ ಹೆಚ್ಚಿಸುತ್ತದೆ ಎಂಬುದು ಹಿರಿಯರ ಮಾತು. ಅದರ ಜೊತೆಗೆ ಭಕ್ತರಿಗೆ ಚರ್ಮ ರೋಗ ಇನ್ನಿತರ ಕಾಯಿಲೆಗಳು ಇದ್ದರೂ ಕೂಡಾ ಅದು ನಿವಾರಣೆಯಾಗುತ್ತದೆ ಎಂಬುದು ಭಕ್ತರ ನಂಬಿಕೆ.

ನಂಬಿದ ಭಕ್ತಾಧಿಗಳು ಈ ಕಾರ್ಯಕ್ರಮದಲ್ಲಿ ಈ ಹಿಂದಿನಿಂದಲೂ ಕಿಕ್ಕಿರಿದು ಸೇರಿದಂತೆ ಈ ಸಲವು ಈ ಗೋಪಾಲ ಕಾವಲಿ ಒಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸಾದವನ್ನು ದೊರಕಿಸಿಕೊಳ್ಳಲು ಜೀವದ ಹಂಗು ತೊರೆದು ಗದ್ದಲಮಯ ವಾತಾವರಣದಲ್ಲಿಯೂ ಭಕ್ತ ಸಮೂಹ ಓಂ ನಮಃ ಶಿವಾಯ ಎಂಬ ನಾಮಾಂಕಿತದ ಭಕ್ತಿಯನ್ನು ಶ್ರೀ ಖಾಸ್ಗತನಿಗೆ ಅರ್ಪಿಸಿದರು.

ವಿಠ್ಠಲನ ಸನ್ನಿದಿಯಿಂದ ಶ್ರೀ ಖಾಸ್ಗತನ ಸನ್ನಿದಿಗೆ

ಈ ಹಿಂದೆ ಶ್ರೀಖಾಸ್ಗತರು ಪಂಡರಪೂರದ ಶ್ರೀ ವಿಠ್ಠಲ ಜಾತ್ರೋತ್ಸವಕ್ಕೆ ತೆರಳಿದಾಗ ಆಷಾಢ ಏಕಾದಶಿ ದಿನದಂದು ವಿಠ್ಠಲ ದೇವಸ್ಥಾನದಲ್ಲಿ ನೆರವೇರಿಸಲಾಗುತ್ತಿರುವ ಗೋಪಾಲ ಕಾವಲಿ ಶ್ರೀಮಠದಲ್ಲಿಯೂ ಏರ್ಪಡಿಸಿದರೆ ಭಕ್ತಾದಿಗಳ ಜೀವನ ಪಾವನವಾಗುತ್ತದೆ ಎಂದು ಶ್ರೀ ಖಾಸ್ಗತರು ತಮ್ಮ ಸ್ವಯಂ ಇಚ್ಛೆಯಿಂದ ಗೋಪಾಲಕಾವಲಿ(ಮೊಸರುಗಡಿಗೆ) ಒಡೆಯುವ ಕಾರ್ಯಕ್ರಮ ಹಮ್ಮಿಕೊಂಡರೆಂದು ಹೇಳಲಾಗುತ್ತದೆ.

ಅದರಂತೆ ಈ ಹಿಂದಿನಿಂದ ನಡೆಸಿಕೊಂಡು ಬರಲಾದ ಈ ಕಾರ್ಯಕ್ರಮದಂತೆ ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದ ಜಾತ್ರೆಯ ಉತ್ಸವದ ಸಮಯದಲ್ಲಿ ಈ ಕಾರ್ಯಕ್ರಮ ನಡೆಸಿಕೊಂಡು ಈಗಲೂ ಬರಲಾಗುತ್ತಿದೆ. ಈ ಹಿಂದಿನ ಸಾಂಪ್ರದಾಯದಂತೆ ಶ್ರೀ ಖಾಸ್ಗತೇಶ್ವರ ಜಾತ್ರೋತ್ಸವ ಸಮಯದಲ್ಲಿ ರಥೋತ್ಸವಕ್ಕೆ ಒಂದು ದಿನ ಮೊದಲು ಗೋಪಾಲ ಕಾವಲಿ ಒಡೆಯುವ ಕಾರ್ಯಕ್ರಮವನ್ನು ಈಗಲೂ ಮುಂದುವರೆಸಿಕೊಂಡು ಭಕ್ತಾಧಿಗಳ ಬೇಕು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅನುವು ಮಾಡಿಕೊಡುತ್ತಿರುವುದು ವಿಶೇಷ.

ಅದರಂತೆ ಈ ಸಲವೂ ರವಿವಾರರಂದು ನಸುಕಿನ ಜಾವ ಜರುಗಿದ ಗೋಪಾಲ ಕಾವಲಿ ಒಡೆಯುವ ಕಾರ್ಯಕ್ರಮದಲ್ಲಿ ಮುಂಬೈ, ಪುಣೆ, ಗೋವಾ, ಹೈದ್ರಾಬಾದ, ಬೆಂಗಳೂರ, ಹುಬ್ಬಳ್ಳಿ, ಗುಲಬರ್ಗಾ, ಒಳಗೊಂಡು ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಿಂದ ಆಗಮಿಸಿದ ಸಾವಿರಾರು ಜನ ಭಕ್ತ ಸಮೂಹ ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದಲ್ಲಿ ಶ್ರೀ ಖಾಸ್ಗತೇಶ್ವರ ಮಠದ ಶ್ರೀ ಸಿದ್ದಲಿಂಗ ದೇವರು, ಹಾಗೂ ಮಠದ ಉಸ್ತುವಾರಿ ವೇ॥ ಮುರುಘೇಶ ವಿರಕ್ತಮಠ, ವೇ॥ ವಿಶ್ವನಾಥ ವಿರಕ್ತಮಠ, ಅನೇಕ ಭಕ್ತಾಧಿಗಳು ಪಾಲ್ಗೊಂಡಿದ್ದರು.ಮಂಗಳವಾರ ಆನೆ ಅಂಭಾರಿ ಮೆರವಣಿಗೆ: ಜೂಲೈ 27 ರಂದು ಬೆಳಿಗ್ಗೆ 8 ಘಂಟೆಗೆ ಶ್ರೀ ಖಾಸ್ಗತ ಮಹಾಸ್ವಾಮಿಗಳ ಬೆಳ್ಳಿ ಮೂರ್ತಿಯನ್ನು ಆನೆ ಅಂಭಾರಿಯ ಮೇಲೆ ಕೂಡ್ರಿಸಿ ಹಾಗೂ ಅಶ್ವಮೇದ ರಥದಲ್ಲಿ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರ ಭವ್ಯ ಮೆರವಣಿಗೆಯು ವಿವಿಧ ಕಲಾ ತಂಡ ಹಾಗೂ ವಾಧ್ಯಮೇಳಗಳೊಂದಿಗೆ ಪಟ್ಟಣದಲ್ಲಿ ನಡೆಯಿತು ಸಾಯಂಕಾಲ 5 ಘಂಟೆಗೆ ಮಹಾರಥೋತ್ಸವ ಜರುಗಿತು.

ಆಷಾಡ ಏಕಾದಶಿಯ ದಿನದಂದು ಪಂಡರಪುರದ ಶ್ರೀ ವಿಠ್ಠಲ ದೇವಸ್ಥಾನದಲ್ಲಿ ಜರುಗುವ ಗೋಪಾಲಕಾವಲಿ ಹಾಗೂ ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದಲ್ಲಿ ಜರುಗುವ ಗೋಪಲಕಾವಲಿ(ಮೊಸರುಗಡಿಗೆ) ಒಡೆಯುವ ಕಾರ್ಯಕ್ರಮಕ್ಕೆ ನೂರಾರು ವರ್ಷಗಳ ಸಂಬಂದವಿದೆ ಭಕ್ತಾಧಿಗಳ ಬೇಕು ಬೇಡಿಕೆಗಳು ಶ್ರೀ ಖಾಸ್ಗತರಿಗೆ ಮುಟ್ಟಿಸಲು ಪ್ರತಿವರ್ಷ ಈ ಗೋಪಾಲ ಕಾವಲಿ ಒಡೆಯುವ ಕಾರ್ಯಕ್ರಮ ನಡೆಸಿಕೊಂಡು ಬರಲಾಗಿದೆ ಮುಂದೆಯೂ ಮುಂದುವರೆಯಲಿದೆ.

ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು

ಶ್ರೀ ಖಾಸ್ಗತೇಶ್ವರಮಠ ತಾಳಿಕೋಟೆ

# ಶಹೀದ್ ತೇಗ್ ಬಹಾದ್ದೂರ್ ಅವರ ಸಂದೇಶ ಯುವ ಪೀಳಿಗೆಗೆ ಮಾದರಿ : ರಾಜ್ಯಪಾಲರು

**ಬೀದರ:** ನಗರದ ಮೈಲೂರ್ ರಸ್ತೆಯಲ್ಲಿರುವ ಗುರು ನಾನಕ ದೇವ್ ಇಂಜಿನೀಯರಿಂಗ್ ಕಾಲೇಜಿನ ಆವರಣದಲ್ಲಿ ಗುರು ತೇಗ್ ಬಹ್ದೂರ್ ಅವರ 350 ನೇ ಶಹೀದಿ ವರ್ಷದ ಅಂಗವಾಗಿ ಸಾಹಿತ್ಯ ಅಕಾಡೆಮಿ ಹಾಗೂ ಗುರು ನಾನಕ ಝಿರಾ ಸಾಹೇಬ್ ಬೀದರ ವತಿಯಿಂದ ಒಂದು ದಿವನದ ಕಾರ್ಯಗಾರ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ ಕರ್ನಾಟಕದ ಗೌರಾನ್ವಿತ ರಾಜ್ಯಪಾಲರಾದ ಶ್ರೀ ಥಾವರಚಂದ ಗ್ಹೇಲೋತ್ ಅವರು ಭಾಗವಹಿಸಿ ಮಾತನಾಡುತ್ತ ಭಾರತ ಸರಕಾರದ ಸಾಂಸ್ಕೃತಿಕ ಮಂತ್ರಾಯಲಕ್ಕೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತ ಮತ್ತು ಇಂತಹ ಕಾರ್ಯಕ್ರಮ ಅಯೋಜಿನೆಯಿಂದ ಜನರಲ್ಲಿ ದೇಶ ಭಕ್ತಿ ಹಾಗೂ ಗುರು ಭಕ್ತಿ ಯಿಂದ ಯುವಕರಲ್ಲಿ ಪರಮತ್ಯಾಗ ಮಾಡುವಂತಹ ಮನೋಭಾವನೆ ಉಂಟಾಗುತ್ತದೆ ಎಂದು ತಿಳಿಸಿದರು. ಸಾಹಿತಿ ಅಕಾಡೆಮಿ ಅವರು ವಿವಿಧ ವಿದ್ವಾನರನ್ನು ಒಂದೇ ವೇದಿಕೆಯ ಮೇಲೆ ಕರೆತಂದಿದ್ದಾರೆ ಎಂದು ನುಡಿದರು. ಬೀದರಿನ ಗುರು ನಾನಕ್ ಜೀರಾ ಕಮಿಟಿಯು ಕಾರ್ಯಗಾರವನ್ನು ಅಚ್ಚುಕಟ್ಟಾಗಿ ಆಯೋಜಿಸಿದಕ್ಕಾಗಿ ಧನ್ಯವಾದ ತಿಳಿಸಿದರು. ಕಾರ್ನಾಟಕದ ಭೂಮಿ ಸದಾ ಸಂತರನಾಡಕ್ಕೆ ಹೆಸರುವಾಸಿಯಾಗಿದೆ. ಈ ನಾಡಿನಲ್ಲಿ ಸಂತರಾದಂತಹ ಬಸವಣ್ಣನವರು, ಕನಕದಾಸರು ಮತ್ತು ಪುರಂದರದಾಸ ಅವರಂತಹ ಅನೇಕ ಮಹಾ ಪುರುಷರ ನಾಡು ಎಂದು ನುಡಿದರು. ಬೀದರ್ ಸಂಸ್ಕೃತಿಕ ನಗರ ಜೊತೆಗೆ ಆಧ್ಯಾತ್ಮಿಕ ಕೇಂದ್ರವಾಗಿದೆ, ಗುರು ನಾನಕ ಜಿ ಅವರ ಪಾದರರ್ಪಣೆಯಿಂದ ಕುಡಿಯುವ ನೀರಿನ ದಾಹ ಇಲ್ಲಿನ ಜನರಿಗೆ ನಿಗಿಸಲಾಗಿದೆ ಎಂದು ತಿಳಿಸಿದರು.

ಗುರು ಜೇಗ್ ಬಹಾದ್ದೂರ್ ಅವರು ಬೇರೆಯವರ ಧರ್ಮವನ್ನು ರಕ್ಷಿಸಲು ತಮ್ಮ ಜೀವ ಸಮರ್ಪಣೆ ಮಾಡಿದವರು ಎಂದು ನುಡಿದರು.

ಈ ಕಾರ್ಯಕ್ರಮದಲ್ಲಿ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಶ್ರೀ ವರುಣಗುಲಾಟಿ,




ಪಂಜಾಬ್‌ನ ಸಾಹಿತ್ಯ ಅಕಾಡೆಮಿಯ ಸಂಯೋಜಕ ರಾವೆಲ್ ಸಿಂಗ್, ಖ್ಯಾತ ಪಂಜಾಬಿ ಲೇಖಕ ಮನಮೋಹನಸಿಂಗ್, ಶ್ರೀ ನಾನಕ ಝಿರಾ ಸಾಹೇಬ್ ಫೌಂಡೇಷನ್‌ನ ಅಧ್ಯಕ್ಷ ಡಾ. ಎಸ್. ಬಲಬೀರಸಿಂಗ್, ಸಾಹಿತಿ ಅಕಾಡೆಮಿಯ ಉಪ ಕಾರ್ಯದರ್ಶಿ ಶ್ರೀಮತಿ ಕುಮುದ್ ಶರ್ಮಾ ಉಪಸ್ಥಿತರಿದ್ದರು.

ಗುರು ನಾನಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಡಾ. ರೇಷ್ಮಾ ಕೌರ್ ವಂದನಾರ್ಪಣೆ ಮಾಡಿದರೆ, ಕರ್ನಲ್ ಆರ್.ಡಿ. ಸಿಂಗ್, ಸರದಾರ ಪುನಿತ್ ಸಿಂಗ್ ಮತ್ತು ಪವತಿ ಸಿಂಗ್ ಮತ್ತು ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಬಂಜೆತನವು ಶಾಪವಲ್ಲ, ನಾಚಿಕೆ ಪಡುವ ವಿಷಯವು ಅಲ್ಲ,ಇದು ಒಂದು ವೈದ್ಯಕೀಯ ಸಮಸ್ಯೆ: ಸ್ತ್ರೀ ತಜ್ಞ ಡಾ. ಶಾರದಾ ಗುದಗೆ




**ಬೀದರ:** ಬಂಜೆತನವು ಶಾಪವಲ್ಲ ಅಥವಾ ನಾಚಿಕೆ ಪಡುವ ವಿಷಯವು ಅಲ್ಲ, ಇದು ಒಂದು ವೈದ್ಯಕೀಯ ಸಮಸ್ಯೆಯಾಗಿದ್ದು, ಸರಿಯಾದ ವೈದ್ಯಕೀಯ ಪರೀಕ್ಷೆ ಮತ್ತು ಚಿಕಿತ್ಸೆಯಿಂದ ಅನೇಕ ದಂಪತಿಗಳಿಗೆ ಸಂತಾನ ಭಾಗ್ಯ ಪಡೆಯುವಂತೆ ನಾವು ಚಿಕಿತ್ಸೆ ನೀಡಿದ್ದೇವೆ ಎಂದು ಗುದಗೆ ಆಸ್ಪತ್ರೆಯ ಹೆಸರಾಂತ ಸ್ತ್ರಿ ತಜ್ಞರಾದ ಡಾ. ಶಾರದಾ ಗುದಗೆ ಅವರು ಹೇಳಿದರು.

ಅವರು ಬೀದರ ನಗರದ ಗುದಗೆ ಆಸ್ಪತ್ರೆಯಲ್ಲಿ ವಿಶ್ವ ಐವಿಎಫ್ ದಿನದ ನಿಮಿತ್ಯವಾಗಿ ಹಮ್ಮಿಕೊಂಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದರು. ಗರ್ಭಧಾರಣೆ ಆಗದಿರುವ ಸ್ಥಿತಿ ಇದು ಮಹಿಳೆಯರಲ್ಲಿ ಮಾತ್ರವಲ್ಲ ಪುರುಷರಲ್ಲಿಯೂ ಕಂಡುಬರುವ ಆರೋಗ್ಯ ಸಮಸ್ಯೆಯಾಗಿದೆ. ಬಂಜೆತನದ ಕಾರಣವನ್ನು ಪತ್ತೆ ಹಚ್ಚಲು ವೈದ್ಯರು ರಕ್ತ ಪರೀಕ್ಷೆ ಅಲ್ಟ್ರಾಸೌಂಡ್ ಸೇರದಂತೆ ಪರೀಕ್ಷೆ ನಡೆಸಿ ಚಿಕಿತ್ಸೆ ನೀಡಬೇಕಾಗುತ್ತದೆ ಎಂದು ಅವರು ವಿವರಿಸಿದ್ದರು.

ಗುದಗೆ ಆಸ್ಪತ್ರೆಯ ಅಧ್ಯಕ್ಷರು ಹಾಗೂ ಹೃದಯ ತಜ್ಞರಾದ ಡಾ. ಚಂದ್ರಕಾಂತ ಗುದಗೆಯವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ವಿಶ್ವದಲ್ಲೇ ಬಂಜೆತನ ಗಂಭಿರ ಸಮಸ್ಯೆಯಾಗಿದ್ದು, ಬಂಜೆನತಕ್ಕೆ ಅಗತ್ಯ ಚಿಕಿತ್ಸೆ ಪಡೆದರೆ ಮಕ್ಕಳಾಗಲು ಸಾಧ್ಯವಾಗುತ್ತದೆ. ಡಾ. ಶಾರದಾ ಗುದಗೆ ಅವರು ಬಂಜೆತನಕ್ಕೆ ಅಗತ್ಯ ಚಿಕಿತ್ಸೆ ನೀಡುತ್ತಿರುವುದರಿಂದ ಸಾಕಷ್ಟು ದಂಪತಿಗಳಿಗೆ ಮಕ್ಕಳಾಗಿವೆ, ಎಂದು ಅವರು ಹೇಳಿದ್ದರು.

ಬಂಜೆತನ ಚಿಕಿತ್ಸೆಗಾಗಿ ಸೋಲಾಪೂರ, ಹೈದ್ರಾಬಾದ, ಪುಣೆ, ಬೆಂಗಳೂರು ಸೇರಿದಂತೆ ದೊಡ್ಡ–ದೊಡ್ಡ ಪಟ್ಟಣಗಳ ಆಸ್ಪತ್ರೆಗೆ ಹೋಗಲು ತಪ್ಪಿಸಲು ಕಡಿಮೆ ಖರ್ಚಿನಲ್ಲಿ ಬಡ ಜನರಿಗೆ ಅಗತ್ಯೆ ಚಿಕಿತ್ಸೆ ನೀಡಲಾಗುತ್ತಿದೆ. ಅಗತ್ಯೆ ಚಿಕಿತ್ಸೆ ಪಡೆದುಕೊಳ್ಳಲು ಅವರು ಮನವಿ ಮಾಡಿದ್ದಾರೆ.

ಗುದಗೆ ಆಸ್ಪತ್ರೆಯ ಡಾ. ಸಚಿನ ಗುದಗೆ, ಡಾ. ಸುಕಾನಂದ, ಹೊಸ ದಿಗಂತ ಕನ್ನಡ ದಿನ ಪತ್ರಿಕೆಯ, ಬೀದರ ಜಿಲ್ಲಾ ವರದಿಗಾರರಾದ ವೆಂಕಟೇಶ ಕೆ. ಮೋರಖಂಡಿಕರ್ ಅವರು ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು. ಇದೆ ಸಂದರ್ಭದಲ್ಲಿ ಗುದಗೆ ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು

# ಮಹಾಸಂಪರ್ಕ ಅಭಿಯಾನ: ಬಿಜೆಪಿ ಮುಖಂಡ ಈಶ್ವರ್‌ಸಿಂಗ್ ಠಾಕೂರ್ ಸಮ್ಮುಖದಲ್ಲಿ ಮನೆ ಮನೆಗೆ ಎಸ್‌ಐಆರ್ ಮತದಾರರ ಪಟ್ಟಿ ಜಾಗೃತಿ



**ಬೀದರ್, ಜು 27:** ಭಾರತೀಯ ಜನತಾ ಪಾರ್ಟಿ ಕರ್ನಾಟಕ ರಾಜ್ಯ ಘಟಕದ ಕರೆ ಮೇರೆಗೆ ಎಸ್‌ಐಆರ್ (Special Intensive Revision) ಮತದಾರರ ಪಟ್ಟಿ ಪರಿಷ್ಕರಣೆ ಅಂಗವಾಗಿ ಹಮ್ಮಿಕೊಳ್ಳಲಾದ ಎರಡು ದಿನಗಳ ಮಹಾಸಂಪರ್ಕ ಅಭಿಯಾನದ ಹಿನ್ನೆಲೆಯಲ್ಲಿ ಬೀದರ್ ನಗರದ ವಾರ್ಡ್ ಸಂಖ್ಯೆ 18ರ ಬೂತ್ ಸಂಖ್ಯೆ 156ರಲ್ಲಿ ಬಿಜೆಪಿ ಮುಖಂಡ ಈಶ್ವರ್‌ಸಿಂಗ್ ಠಾಕೂರ್ ಅವರ ಸಮ್ಮುಖದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು.

ಅಭಿಯಾನದ ವೇಳೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಮತದಾರರನ್ನು ಭೇಟಿ ಮಾಡಿ ಎಸ್‌ಐಆರ್ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಮಾಹಿತಿ ನೀಡುವುದರೊಂದಿಗೆ ಮತದಾರರ ಪಟ್ಟಿಯಲ್ಲಿರುವ ವಿವರಗಳು ಹಾಗೂ ಸಂಬಂಧಿತ ನಮೂನೆಗಳನ್ನು ಪರಿಶೀಲಿಸಿದರು. ಮತದಾರರು ತಮ್ಮ ಹೆಸರು, ವಿಳಾಸ ಸೇರಿದಂತೆ ಅಗತ್ಯ ಮಾಹಿತಿಯನ್ನು ಪರಿಶೀಲಿಸಿಕೊಂಡು ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಈಶ್ವರ್‌ಸಿಂಗ್ ಠಾಕೂರ್, ಮಹಾನಗರ ಪಾಲಿಕೆ ಸದಸ್ಯೆ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶ್ರೀಮತಿ ಉಲ್ಲಾಸಿನಿ ವಿಕ್ರಂ ಮುದ್ದಾಳೆ, ವಾರ್ಡ್ ಅಧ್ಯಕ್ಷ ಶ್ರೀ ವಿಕ್ರಂ ಮುದ್ದಾಳೆ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಮಹಾನಂದ ಪಾಟೀಲ್, ಶ್ರೀಮತಿ ಸವಿತಾ, ಮಹಿಳಾ ಮೋರ್ಚಾ ಪದಾಧಿಕಾರಿಗಳು, ಬಿಎಲ್‌ಎ ಶ್ರೀ ರಾಜು ಪಾಟೀಲ್, ವಾರ್ಡ್ ಪ್ರಮುಖರಾದ ಶ್ರೀ ಚಂದ್ರಕಾಂತ್ ಜೋಪಟೆ, ಶ್ರೀ ಸಂಜು ಕುಮಾರ್ ಕೆಂಚೆ, ಶ್ರೀ ಧನರಾಜ್ ಮಡಿಕೆ, ಶ್ರೀ ವೈಜನಾಥ ಸ್ವಾಮಿ, ಶ್ರೀ ರವೀಂದ್ರ ಡಯೋಡೆ ಸೇರಿದಂತೆ ಹಲವಾರು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸ್ವರ್ಣ ಬೇಟೆಗೆ ಸಜ್ಜಾದ ಬಾಕ್ಸರ್ ಜೈಸ್ಮಿನ್



**ಗ್ಲಾಸ್ಗೊ, ಜು.27**–ಭಾರತದ ಹಾಲಿ 57 ಕೆ.ಜಿ ವಿಶ್ವ ಚಾಂಪಿಯನ್ ಬಾಕ್ಸರ್ ಜೈಸ್ಮಿನ್ ಲ್ಯಾಂಬೋರಿಯಾ ಜೀವನೋಪಾಯಕ್ಕಾಗಿ ಪಂಚ್ ಗಳನ್ನು ಹೊಡೆಯುತ್ತಾರೆ, ಆದರೆ ಒತ್ತಡವನ್ನು ನಿಭಾಯಿಸುವ ವಿಷಯಕ್ಕೆ ಬಂದಾಗ, ಅವರು ಸ್ಫೂರ್ತಿಗಾಗಿ ದೇಶದ ಅತ್ಯಂತ ಪ್ರಸಿದ್ಧ ಕ್ರಿಕೆಟ್ ದಂತಕಥೆಗಳಲ್ಲಿ ಒಬ್ಬರನ್ನು ಸ್ಮರಿಸುತ್ತಾರೆ.

"ಎಂಎಸ್ ಧೋನಿ ಅವರ ಮನಸ್ಥಿತಿಯನ್ನು ನಾನು ನಿಜವಾಗಿಯೂ ಮೆಚ್ಚುತ್ತೇನೆ " ಎಂದು ಹೇಳುವ ಲಾಂಬೋರಿಯಾ, " ಧೋನಿ ಅವರನ್ನು ಒಂದು ಕಾರಣಕ್ಕಾಗಿ 'ಕ್ಯಾಪ್ಟನ್ ಕೂಲ್ ಎಂದು ಕರೆಯಲಾಗುತ್ತದೆ ಮತ್ತು ನಾನು ಅವರಂತೆಯೇ ಶಾಂತವಾಗಿರಲು ಬಯಸುತ್ತೇನೆ," ಎಂದು ಸೇನಾ ಬಾಕ್ಸರ್ ಜೈಸ್ಮಿನ್ ಹೇಳಿದ್ದಾರೆ.

ಆ ಸಂಯಮವು ಮುಂಬರುವ ದಿನಗಳಲ್ಲಿ ಲ್ಯಾಂಬೋರಿಯಾಕ್ಕೆ ವಿಶೇಷವಾಗಿ ಮೌಲ್ಯಯುತವಾಗಿರುತ್ತದೆ. 24 ವರ್ಷದ ಅವರು ಗ್ಲಾಸ್ಗೊ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಪ್ರಬಲ ಬಾಕ್ಸಿಂಗ್ ಚಿನ್ನದ ಪದಕ ಸಂಭಾವ್ಯರಲ್ಲಿ ಒಬ್ಬರಾಗಿದ್ದಾರೆ. 2022ರ ಬರ್ಮಿಂಗ್ ಹ್ಯಾಮ್ ನಲ್ಲಿ ಗೆದ್ದ ಕಂಚಿನ ಪದಕವನ್ನು ಅವರು ಹಳದಿ ಪದಕವಾಗಿ ಪರಿವರ್ತಿಸಲು ಎದುರು ನೋಡುತ್ತಿದ್ದಾರೆ.

ಲಿವರ್ ಪೂಲ್ ನಲ್ಲಿ ವಿಶ್ವ ಚಾಂಪಿಯನ್ ಆಗುವ ಮೊದಲು ಅಸ್ತಾನಾ ಮತ್ತು ದೆಹಲಿಯಲ್ಲಿ ವಿಶ್ವಕಪ್ ಚಿನ್ನವನ್ನು ಗೆದ್ದ 2025 ರ ಬ್ರೇಕ್ ಔಟ್ ನಿಂದ ಹೊರಬಂದ ಲ್ಯಾಂಬೋರಿಯಾ ಗ್ಲಾಸ್ಗೊದಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಲು ಸಜ್ಜಾಗಿದ್ದಾರೆ.

" ಹಿಂದಿನ ಪದಕದ ಬಣ್ಣವನ್ನು ಚಿನ್ನಕ್ಕೆ ಬದಲಾಯಿಸುವ ಗುರಿ ಹೊಂದಿದ್ದೇನೆ" ಎಂದು ಹೇಳುವ ಅವರು,"ಅದಕ್ಕಾಗಿಯೇ ನಾನು ಸಿದ್ಧತೆ ನಡೆಸುತ್ತಿದ್ದೇನೆ," ಎಂದು ಹೇಳಿದ್ದಾರೆ.

5 ಅಡಿ 81/2 ಇಂಚು ಎತ್ತರವಿರುವ ಲಂಬೋರಿಯಾ ಭಾರತೀಯ ಬಾಕ್ಸಿಂಗ್ ಮಾನದಂಡಗಳ ಪ್ರಕಾರ ಎತ್ತರವಾಗಿದೆ. ಪ್ಯಾರಿಸ್ ನಲ್ಲಿ ನಡೆದ ಅವರ ಒಲಿಂಪಿಕ್ ಚೊಚ್ಚಲ ಪಂದ್ಯವು ಟೋಕಿಯೊ ಬೆಳ್ಳಿ ಪದಕ ವಿಜೇತ ಫಿಲಿಪೈನ್ಸ್ ನ ನೆಸ್ತಿ ಪೆಟೆಸಿಯೊ ವಿರುದ್ಧ ಮೊದಲ ಸುತ್ತಿನ ಸೋಲಿನಲ್ಲಿ ಕೊನೆಗೊಂಡಿತ್ತು.

## ಶರಣ ಹಡಪದ ಅಪ್ಪಣ್ಣನವರ 892ನೇ ಜಯಂತಿ ಆಚರಣೆಗೆ ಸಿದ್ಧತೆಜು.29ರಂದು ನಗರದಲ್ಲಿ ಭಾವಚಿತ್ರ ಮೆರವಣಿಗೆ, ಅದ್ದೂರಿ ಜಯಂತಿ



**ವಿಜಯಪುರ,ಜು.27:** ವಚನ ಸಾಹಿತ್ಯದ ಶ್ರೇಷ್ಠ ವಚನಕಾರ, ಸಮಾಜ ಸುಧಾರಕ ಶರಣ ಹಡಪದ ಅಪ್ಪಣ್ಣರ 892ನೇ ಜಯಂತಿಯನ್ನು ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸಲು ವಿಜಯಪುರದಲ್ಲಿ ಪೂರ್ವಭಾವಿ ಸಭೆ ನಡೆಯಿತು. ರಾಷ್ಟ್ರೀಯಸುದ್ದಿ

ನಗರದ ಹಡಪದ ಅಪ್ಪಣ್ಣರ ಸಭಾಭವನದಲ್ಲಿ ನಡೆದ ಸಭೆಯಲ್ಲಿ ಜಯಂತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆ ನೀಡಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶರಣ ಹಡಪದ ಅಪ್ಪಣ್ಣ ಸಮಾಜ ಸಂಘದ ಅಧ್ಯಕ್ಷ ಬಸವರಾಜ ಶಿವಶರಣ ಮಾತನಾಡಿ, ಶರಣ ಹಡಪದ ಅಪ್ಪಣ್ಣರು ವಚನ ಸಾಹಿತ್ಯದ ಶ್ರೇಷ್ಠ ವಚನಕಾರರಾಗಿದ್ದು, ಸಮಾನತೆ, ಸತ್ಯ, ವಿನಯ ಹಾಗೂ ಮಾನವೀಯ ಮೌಲ್ಯಗಳನ್ನು ಸಾರಿದ ಮಹಾನ್ ಸಂತರು ಎಂದು ಹೇಳಿದರು. ಅವರ ಆದರ್ಶಗಳನ್ನು ಸಮಾಜದಲ್ಲಿ ಹರಡುವ ಉದ್ದೇಶದಿಂದ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಶರಣಪ್ಪ ಹಡಪದ (ಉತ್ನಾಳ) ಮಾತನಾಡಿ, ಜು.29ರಂದು ಬೆಳಿಗ್ಗೆ 9.30ಕ್ಕೆ ನಗರದ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಶರಣ ಹಡಪದ ಅಪ್ಪಣ್ಣರ ಭಾವಚಿತ್ರದ ಮೆರವಣಿಗೆ ಆರಂಭವಾಗಲಿದೆ ಎಂದು ತಿಳಿಸಿದರು. ಮೆರವಣಿಗೆಯು ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಕನಕ ವೃತ್ತ ಮಾರ್ಗವಾಗಿ ಕಂದಗಲ್ ಹನುಮಂತರಾಯ ರಂಗಮಂದಿರ ತಲುಪಲಿದ್ದು, ಅಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ಸಹಯೋಗದಲ್ಲಿ 892ನೇ ಜಯಂತಿ ಸಮಾರಂಭ ನಡೆಯಲಿದೆ ಎಂದರು.

ಜಿಲ್ಲಾಧಿಕಾರಿ ಡಾ. ಕೆ. ಆನಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಜಿ.ಎಸ್. ಹೊಸಟ್ಟಿ, ಹಿರಿಯ ಮುಖಂಡ ಡಾ. ಅರ್ಜುನಿ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ದಶರಥ ನಾವಿ, ಬಾಬು ಹಡಪದ, ಬಸವರಾಜ ಬೆಕಿನಾಳ, ಎಸ್.ಜಿ. ದೇವೂರ, ಡಾ. ಪ್ರಕಾಶ ಹಡಪದ, ಮಲ್ಲಿಕಾರ್ಜುನ ಹಡಪದ (ತಿಕೋಟಾ), ತಾಲೂಕು ಪ್ರತಿನಿಧಿ ಪ್ರಹ್ಲಾದ ಹಡಪದ, ನಾಗಪ್ಪ ಹಡಪದ (ಮನಗೂಳಿ), ಶಂಕರ ಹಡಪದ, ಮಲ್ಲಿಕಾರ್ಜುನ ಹಳಿಮನಿ, ನಗರ ಘಟಕದ ಅಧ್ಯಕ್ಷ ರಮೇಶ್ ಬ್ಯಾಳ್ಯಾಳ, ಉಪಾಧ್ಯಕ್ಷ ರವಿಚಂದ್ರ ಹಡಪದ, ಕಾರ್ಯದರ್ಶಿ ಮಂಜುನಾಥ ಹಾಗೂ ಇತರ ಪದಾಧಿಕಾರಿಗಳು ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
**6360866626**

# ಬನದೇಶ್ವರ ಕಿರು ರಥೋತ್ಸವದ ಪೂರ್ವಭಾವಿ ಸಭೆ



**ಗುರುಮಠಕಲ್:**ಗಾಣಿಗ ಸಮಾಜದ ವತಿಯಿಂದ ಕಾಳೆಬೆಳಗುಂದಿಯ ಶ್ರೀ ಬನದೇಶ್ವರ ದೇವಸ್ಥಾನದಲ್ಲಿ, ಶ್ರಾವಣ ಮಾಸದ ಎರಡನೇ ಸೋಮವಾರ ನಡೆಯಲಿರುವ ವಾರ್ಷಿಕ ಕಿರು ರಥೋತ್ಸವದ ಅಂಗವಾಗಿ ಪೂರ್ವಭಾವಿ ಸಭೆಯು ಅತ್ಯಂತ ಯಶಸ್ವಿಯಾಗಿ ನಡೆಯಿತು.

ರವಿವಾರದಂದು ನಡೆದ ಸಭೆಯಲ್ಲಿ ಕಿರು ರಥೋತ್ಸವದ ರೂಪುರೇಷೆಗಳು, ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಸ್ಥಳೀಯ ಪ್ರಮುಖ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದೊಂದಿಗೆ ಕಿರು ರಥೋತ್ಸವವನ್ನು ಭಕ್ತಿ, ಶ್ರದ್ಧೆ ಹಾಗೂ ವಿಜೃಂಭಣೆಯಿಂದ ಆಚರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಭೆಯಲ್ಲಿ ಯಾದಗಿರಿ ತಾಲೂಕು ಗಾಣಿಗ ಸಮಾಜದ ಅಧ್ಯಕ್ಷರಾದ ಶ್ರೀ ಜಗದೀಶ್ ಸಜ್ಜನ್, ಹಿರಿಯ ಮುಖಂಡರಾದ ಶ್ರೀ ಸಿದ್ರಾಮಪ್ಪ ಸಜ್ಜನ್, ಶ್ರೀ ಹಂಪಣ್ಣ ಸಜ್ಜನ್ (ಮಾಧ್ವಾರ), ಶ್ರೀ ಶರಣಪ್ಪ ಸಜ್ಜನ್ (ಬಾಡಿಯಾಳ) , ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವೀರೇಶ್ ಸಜ್ಜನ್, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಸಂಪತಕುಮಾರ ಸಜ್ಜನ್ ಹಾಗೂ ರಾಯಚೂರು ಗಾಣಿಗ ಸಮಾಜದ ಪ್ರಮುಖರಾದ ಶ್ರೀ ಪ್ರಭಾಕರ ಸಜ್ಜನ್, ಶ್ರೀ ವಿಜಯಕುಮಾರ್ ಸಜ್ಜನ್ (ಎಲ್ಹೇರಿ), ರಾಜಲಿಂಗಪ್ಪ ಸಜ್ಜನ ಚಂಡರಕಿ ಸೇರಿದಂತೆ ಸಮಾಜದ ಅನೇಕ ಮುಖಂಡರು ಹಾಗೂ ಅಪಾರ ಸಂಖ್ಯೆಯ ಸಮಾಜದ ಬಂಧುಗಳು ಭಾಗವಹಿಸಿದ್ದರು.

ಸಭೆಯ ಅಂತ್ಯದಲ್ಲಿ ಕಿರು ರಥೋತ್ಸವವನ್ನು ಸಮಾಜದ ಎಲ್ಲಾ ಬಂಧುಗಳ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಸಲು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಮಾಜದ ಸದಸ್ಯರಿಗೆ ಮನವಿ ಮಾಡಲಾಯಿತು.

# ಸಿಂದಗಿ ಕಾರ್ಗಿಲ್ ಸ್ಮರಣೆ: ಮಾಜಿ ಸೈನಿಕರಿಗೆ ಸನ್ಮಾನ

**ಸಿಂದಗಿ:** ದೇಶದ ರಕ್ಷಣೆಯಲ್ಲಿ ಸೈನಿಕರ ಪಾತ್ರ ಬಹಳ ಮುಖ್ಯವಾಗಿರುತ್ತದೆ. 1999ರಲ್ಲಿ ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧ ಹೋರಾಡಿ ಹುತಾತ್ಮರಾದ ಭಾರತೀಯ ವೀರರ ಸ್ಮರಣಾರ್ಥ ಈ ಕಾರ್ಗಿಲ್ ವಿಜಯೋತ್ಸವವನ್ನು ಆಚರಿಸಲಾಗುತ್ತದೆ. ಸೈನಿಕರು ತಮ್ಮ ತ್ಯಾಗ ಬಲಿದಾನದಿಂದ ದೇಶದ ರಕ್ಷಣೆಯಲ್ಲಿ ಮಹತ್ವದ. ಪಾತ್ರ ವಹಿಸಿದರು. ಈ ನೆನಪಿನಲ್ಲಿ ಥೈರೋಕೇರ್ ಪ್ರಾಂಚೈಸಿಯು ರಿಯಾಯತಿಯಲ್ಲಿ ಆರೋಗ್ಯ ಮತ್ತು ರಕ್ತ ತಪಾಸಣೆ ಮಾಡುತ್ತದೆ. ಸಾರ್ವಜನಿಕರು ಲಾಭ ಪಡೆಯಬೇಕು ಎಂದು ಸಿಂದಗಿ ತಾಲೂಕ ಗ್ಯಾರಂಟಿ ಯೋಜನೆಯ ಸದಸ್ಯ ರಜಾಕ್ ತಾಂಬೆ ಹೇಳಿದರು.

ಅವರು ಸಿಂದಗಿಯ ಸಾಯಿ ರಕ್ತ ತಪಾಸಣಾ ಕೇಂದ್ರವು ಆಯೋಜಿ ಸಿದ್ದ ಕಾರ್ಗಿಲ್ ವಿಜಯೋತ್ಸವದ ನಿಮಿತ್ಯ ಮಾಜಿ ಸೈನಿಕರಿಗಾಗಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಮತ್ತೊಬ್ಬ ಮುಖ್ಯ ಅತಿಥಿ ಜೇವರ್ಗಿ ಸರ್ಕಾರಿ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಖಾಜಾವಲಿ ಈಚನಾಳ ಮಾತನಾಡಿ ದೇಶವು ಸುಭದ್ರ ಮತ್ತು ಸುರಕ್ಷಿತ ವಾಗಿ ಇರಬೇಕಾದರೆ ಸೈನಿಕರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಅದಕ್ಕಾಗಿಯೇ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಜಿ ಯವರು ಜೈ ಜವಾನ್ ಜೈ ಕಿಸಾನ್ ಎಂದು ಹೇಳಿ ಸೈನಿಕರಿಗೆ ಮತ್ತು ರೈತರಿಗೆ ಪ್ರಾಶಸ್ತ ನೀಡಿದ್ದರು. ಸಾಯಿ ಲ್ಯಾಬ್ ಥೈರೋಕೇರ್ ಪ್ರಾಂಚೆಸಿಯು ಮಾಜಿ ಸೈನಿಕರನ್ನು ಗುರುತಿಸಿ ಅವರನ್ನು ಸನ್ಮಾನ ಮಾಡಿದ ಕಾರ್ಯ ಬಹಳ ಸ್ತುತ್ಯಾರ್ಹವಾದದ್ದು ಎಂದು ಶ್ಲಾಘಿಸಿದರು. ಸಾಯಿ ಲ್ಯಾಬ್ ಮುಖ್ಯಸ್ಥರ ಈ ಕಾರ್ಯವನ್ನು ಅಭಿನಂದಿಸಿದರು. ಮಾಜಿ ಸೈನಿಕರಾದ ಸಿದ್ದರಾಮ ಹೊರಕೇರಿ ಮತ್ತು ಉದಯ್ ಕುಮಾರ್ ಬಗಲಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕದ ಮಾಜಿ ಸೈನಿಕರ ಸಂಘದ ಗೌರವಾಧ್ಯಕ್ಷ ಶಬ್ಬೀರ್ ಪಟೇಲ್, ಸಿಂದಗಿ ತಾಲೂಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ರವೀಂದ್ರ ಬಿರಾದಾರ್, ಪ್ರಧಾನ ಕಾರ್ಯದರ್ಶಿ ಹನುಮಂತ್ರಾಯ ಬಿರಾದಾರ, ಖಜಾಂಚಿ ಸಿದ್ದರಾಮ, ಅಪ್ಪಸಾಹೇಬ್



ಬೇವಿನಮಟ್ಟಿ, ಮಲ್ಲಿಕಾರ್ಜುನ ಬಿರಾದಾರ, ಉದಯ್ ಕುಮಾರ್ ಬಗಲಿ, ಜಗದೀಶ್ ಶಿವಣಗಿ, ಅಣ್ಣಾರಾಯ ವಾಲೀಕಾರ್, ಈರಣ್ಣ ತಳವಾರ್ ಈ ಎಲ್ಲ ಮಾಜಿ ಸೈನಿಕರನ್ನು ಡಾ. ಅರುಣ ಆವುಟಿ ಶಾಲು ಹಾರ ಹಾಕಿ ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಸಾಯಿ ರಕ್ತ ತಪಾಸಣಾ ಕೇಂದ್ರದ ಮುಖ್ಯಸ್ಥರಾದ ಬಸೀರ್ ಅಹ್ಮದ್ ಅತ್ತಾರ್ ಅಧ್ಯಕ್ಷತೆ ವಹಿಸಿದ್ದರು. ಸಾಯಿ ಲ್ಯಾಬಿನ ಸಿಬ್ಬಂದಿಗಳಾದ ಅಬ್ದುಲ್, ಆದಮ್, ಅಬ್ಬಾಸ್, ರೆಹಾನ್, ಆಯೇಶಾ, ಶರಣಗೌಡ, ಸಾಹಿಲ್, ಸಾಧಿಕ್, ಅಭಿಜಿತ್ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಜ್ಯೋತಿಷ್ಯ ಶಾಸ್ತ್ರದ ವೈಜ್ಞಾನಿಕ ಅಧ್ಯಯನ ಅಗತ್ಯ: ಎನ್.ಎಂ. ಬಿರಾದಾರ




**ವಿಜಯಪುರ, ಜು. 27:** 64 ವಿದ್ಯೆಗಳಲ್ಲಿ ಜ್ಯೋತಿಷ್ಯ ಶಾಸ್ತ್ರವು ಅತ್ಯಂತ ಪ್ರಮುಖ ಸ್ಥಾನ ಹೊಂದಿದ್ದು, ಈ ಕ್ಷೇತ್ರದಲ್ಲಿ ಸಮರ್ಪಕ ತರಬೇತಿ ಇಲ್ಲದೆ ಪ್ರವೇಶಿಸುವವರಿಂದ ಶಾಸ್ತ್ರಕ್ಕೆ ಅಪಕೀರ್ತಿ ಉಂಟಾಗುತ್ತಿದೆ ಎಂದು ಚಾಣಕ್ಯ ಕರಿಯರ್ ಆಕಾಡೆಮಿ ಸಂಸ್ಥಾಪಕ ಎನ್.ಎಂ. ಬಿರಾದಾರ ಹೇಳಿದರು.

ನಗರದ ವಿವೇಕನಗರದ ಶ್ರೀ ಪಂಚಮುಖಿ ಹನುಮಾನ್ ದೇವಸ್ಥಾನದಲ್ಲಿ ವಿಜಯಪುರ ಜಿಲ್ಲಾ ಜ್ಯೋತಿಷಿಗಳ ಸಂಘ ಆಯೋಜಿಸಿದ್ದ ಉಚಿತ ಜ್ಯೋತಿಷ್ಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾರಾಷ್ಟ್ರ, ಬೆಂಗಳೂರು ಸೇರಿದಂತೆ ವಿವಿಧೆಡೆಯ ಪಂಚಾಂಗಗಳನ್ನು ಜನರು ಬಳಸುತ್ತಿದ್ದ ಸಂದರ್ಭದಲ್ಲೇ, ಸ್ಥಳೀಯರಾದ ಪಂ. ಗುರುರಾಜ ಆಚಾರ್ಯ ಹೆರಕಲ್ ಅವರು ರಚಿಸುತ್ತಿರುವ ಸಾಕ್ಷಿ ಪಂಚಾಂಗ ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ನಮ್ಮ ಸಂಸ್ಕೃತಿ ಹಾಗೂ ಆಚಾರ-ವಿಚಾರಗಳನ್ನು ವಿರೋಧಿಸುವ ಕೆಲವರು ಜ್ಯೋತಿಷ್ಯ ಶಾಸ್ತ್ರವನ್ನು ಕಡೆಗಣಿಸುತ್ತಿದ್ದಾರೆ. ಜ್ಯೋತಿಷ್ಯವು ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನವಾಗಿದ್ದು, ಅದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಕಲಿಯುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಉಚಿತ ತರಬೇತಿ ಕಾರ್ಯಾಗಾರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಪಂ. ಸಂಜೀವಭಟ್ಟ ಬೀಳಗಿ, ಜ್ಯೋತಿಷ್ಯ ಎಂದರೆ ಕೇವಲ ಭವಿಷ್ಯ ಹೇಳುವ ಕಲೆ ಅಲ್ಲ. ಇದು ಖಗೋಳ ವಿಜ್ಞಾನ ಹಾಗೂ ಗಣಿತಶಾಸ್ತ್ರದ ಆಳವಾದ ಅಧ್ಯಯನವಾಗಿದೆ. ಆಸಕ್ತರು ಪಂಚಾಂಗ ಹಾಗೂ ಜ್ಯೋತಿಷ್ಯವನ್ನು ಪ್ರಾಮಾಣಿಕವಾಗಿ ಅಧ್ಯಯನ ಮಾಡಬೇಕು ಎಂದು ಕರೆ ನೀಡಿದರು.

ರತ್ನಶಾಸ್ತ್ರಜ್ಞ ದೌಲತರಾವ ಮುದ್ದೇಬಿಹಾಳ ಮಾತನಾಡಿ, ಜನ್ಮಕುಂಡಳಿಯಲ್ಲಿ ಯೋಗವಿದ್ದರೆ ಮಾತ್ರ ಜ್ಯೋತಿಷ್ಯ ಅಧ್ಯಯನದ ಅವಕಾಶ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಆರ್.ಕೆ. ಇನಾಮದಾರ ಮಾತನಾಡಿ, ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳ ಅಧ್ಯಯನದ ಮೂಲಕ ಖಗೋಳ ಶಾಸ್ತ್ರವನ್ನು ಅರಿತು ಜ್ಯೋತಿಷ್ಯವನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಬೇಕು. ನಿರಂತರ ಅಧ್ಯಯನ ಮತ್ತು ಪ್ರಯೋಗಗಳಿಂದ ಮಾತ್ರ ಜ್ಯೋತಿಷ್ಯದಲ್ಲಿ ಪಾಂಡಿತ್ಯ ಸಾಧಿಸಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮವನ್ನು ಅಚ್ಯುತ್ ಪುರೋಹಿತ್ ನಿರೂಪಿಸಿದರು. ವಿಜಯಪುರ ಜಿಲ್ಲಾ ಜ್ಯೋತಿಷಿಗಳ ಸಂಘದ ಅಧ್ಯಕ್ಷ ಗುರುರಾಜ ಆಚಾರ್ಯ ಹೆರಕಲ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಡಾ. ಮಹೇಶ ಕುಲಕರ್ಣಿ ಹಾಗೂ ನಾರಾಯಣ ಘೋರ್ಪಡೆ ತರಬೇತಿ ನಡೆಸಿಕೊಟ್ಟರು. ದತ್ತಾತ್ರೇಯ ದೀಕ್ಷಿತ, ರಾಘವೇಂದ್ರ ಆಚಾರ್ಯ ಕುರುಡಿ, ಯಲಗೂರೇಶ ಕುಲಕರ್ಣಿ, ಅಂಜಲಿ ಪುರೋಹಿತ, ಅಮೃತಾ ಕುಲಕರ್ಣಿ, ಹಿರೊಳ್ಳಿ, ಅನೀಲ ಮಾಶ್ಯಾಳಕರ, ಶ್ರೀಧರಭಟ್ಟ ಜುಮನಾಳಕರ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE